# ಭಾರತದಲ್ಲಿ ಕೃಷಿ ಮಾರುಕಟ್ಟೆ ನಿಯಂತ್ರಿಸುವ ಹೊಸ ಕಾನೂನುಗಳಿಂದ ರೈತರ ಮೇಲಿನ ಪರಿಣಾಮಗಳು

ಎಂ ಜಿ ಚಂದ್ರಕಾಂತ್, ನಿರ್ದೇಶಕರು (ನಿವೃತ್ತ), ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ, ಬೆಂಗಳೂರು ಹಾಗೂ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು (ನಿವೃತ್ತ), ಕೃಷಿ ಅರ್ಥಶಾಸ್ತ್ರ, ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು, ಮಿಂಚಂಚೆ: mgchandrakanth@gmail.com

ಕೃಷಿಯಲ್ಲಿ ಭಾರತದ ಯಶಸ್ಸು ಹಸಿರು ಕ್ರಾಂತಿಯ ತಂತ್ರಜ್ಞಾನಗಳಲ್ಲಿ ಬೆಳೆ ಮತ್ತು ಜಾನುವಾರು ಉತ್ಪಾದಕತೆಯು ವೈವಿಧ್ಯಮಯ ಕೃಷಿ ವಲಯಗಳ ಮೇಲೆ ಸ್ಥಿರತೆ ಮತ್ತು ಹೊಂದಾಣಿಕೆಯ ಮೂಲಕ ವ್ಯಾಪಿಸಿದೆ. ಉತ್ಪಾದಕತೆಯ ಏರಿಕೆಯನ್ನು ಸಾಧಿಸಲಾಗಿದ್ದರೂ, ಇದು ಕೃಷಿ ಆದಾಯದಲ್ಲಿ ಅನುಗುಣವಾದ ಏರಿಕೆಗೆ ಕಾರಣವಾಗಿಲ್ಲ. ಈ ನಿಟ್ಟಿನಲ್ಲಿ ರೈತರು, ಸಂಶೋಧಕರು ಮತ್ತು ನೀತಿ ನಿರೂಪಕರು ವ್ಯಾಪಕವಾಗಿ ಗುರುತಿಸಿರುವ ಒಂದು ನಿರ್ಬಂಧವೆಂದರೆ, ಅಸ್ತಿತ್ವದಲ್ಲಿರುವ ಕೃಷಿ ಮಾರುಕಟ್ಟೆಗಳಲ್ಲಿ ಹೆಚ್ಚುತ್ತಿರುವ ಮಾರುಕಟ್ಟೆ ಅಪೂರ್ಣತೆಗಳು ಮತ್ತು ಮಾರುಕಟ್ಟೆಯ ಅಸಮರ್ಥತೆ. ಈ ಮಾರುಕಟ್ಟೆ ಅಪೂರ್ಣತೆಯು ಕೆಲವು ಖರೀದಿದಾರರ ಉಪಸ್ಥಿತಿಯಲ್ಲಿ ಹೆಚ್ಚಿನ ಸಂಖ್ಯೆಯ ರೈತ ಮಾರಾಟಗಾರರು ಎದುರಿಸುತ್ತಿರುವ ಆಲಿಗೋಪ್ಸೋನಿ ಮಾರುಕಟ್ಟೆಯನ್ನು ಸೂಚಿಸುತ್ತದೆ. ಮಾರುಕಟ್ಟೆ ಅಸಮರ್ಥತೆಗಳು, ಸರಿಯಾದ ರಸ್ತೆಗಳು ಇಲ್ಲದಿರುವ, ಶೇಖರಣಾ ಸೌಲಭ್ಯಗಳ ಕೊರತೆ ಇರುವ, ತೂಕದ ಸೌಲಭ್ಯಗಳು ಸರಿಯಾಗಿಲ್ಲದೆಯೇ ಇರುವ, ಶ್ರೇಣೀಕರಣದ ಸೌಲಭ್ಯಗಳು ಲಭ್ಯವಿಲ್ಲದ ಹಾಗೂ ಮಾರಾಟ ಮಾಡಲು ಇತರೇ ಮೂಲಸೌಕರ್ಯಗಳ ಕೊರತೆ, ಮಧ್ಯವರ್ತಿಗಳಿಂದ ರೈತರಿಗೆ ಪಾವತಿಸುವ ಮೊತ್ತದಿಂದ ಅಕ್ರಮ ಕಡಿತಗಳು, ಅನುಚಿತ ತೂಕ, ಉತ್ಪನ್ನ ಮಾರುಕಟ್ಟೆಯೊಂದಿಗೆ ರೈತರಿಗೆ ಸಾಲದ ಬಾಧೆಯಿಂದ ನರಳುವ ಮಾರುಕಟ್ಟೆ ಅಸಮರ್ಥತೆಯನ್ನು ಹೆಚ್ಚಿಸುತ್ತಿವೆ. ಹಾಗೂ ರೈತರು ತಮ್ಮ ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡಲು ಸಾಧ್ಯವಾಗದೆಯೇ ಪರಿಣಾಮವಾಗಿ ಕಡಿಮೆ ಆದಾಯ ಬರುತ್ತದೆ.

## ಕೃಷಿ ಮಾರುಕಟ್ಟೆಯ ವ್ಯವಸ್ಥೆಯ ಕಾರ್ಯಕ್ಷಮತೆ

ಎಫ್ಎಒ ಪ್ರಕಾರ ಯಾವದೇ ಮಾರುಕಟ್ಟೆಯ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಮೂರು ಮಾನ ದಂಡಗಳಿಂದ ನಿರ್ಣಯಿಸಬಹುದು: (1) ಅಂತಿಮ ಬಳಕೆದಾರ ಅಥವಾ ಗ್ರಾಹಕ ಪಾವತಿಸುವ ಚಿಲ್ಲರೆ ಬೆಲೆಯಲ್ಲಿ ರೈತರ ಪಾಲು; (2) ಗ್ರಾಹಕರು ಕೊಡುವ ಬೆಲೆ ಹಾಗೂ ರೈತರಿಗೆ ಸಿಕ್ಕುವ ಬೆಲೆಯ ಅಂತರ, ಮತ್ತು (3) ಎಷ್ಟು ಗ್ರಾಹಕರ ಆದಾಯದ ಪ್ರಮಾಣವನ್ನು ಆಹಾರಕ್ಕಾಗಿ ಖರ್ಚು ಮಾಡಲಾಗುತ್ತಿದೆ ಎಂಬ ಅಂಶಗಳು. ಭಾರತದಲ್ಲಿ, ರೈತರು ಗ್ರಾಹಕರ ರೂಪಾಯಿಯಲ್ಲಿ 50% ಕ್ಕಿಂತ ಕಡಿಮೆ ಪಡೆಯುತ್ತಿದ್ದಾರೆ, ಹಾಗೂ ಗ್ರಾಹಕ ಬೆಲೆ ಹಾಗೂ ರೈತರ ಬೆಲೆಯ ಅಂತರ ಹೆಚ್ಚಾಗಿದ್ದು, ಇವು ಅತಿಯಾದ ಮಧ್ಯವರ್ತಿಗಳಿಂದಾಗಿ ಮಾರುಕಟ್ಟೆ ವೆಚ್ಚ ಹೆಚ್ಚಾಗಿ ರೈತರ ಆದಾಯ ಕುಗ್ಗುತ್ತಿದ್ದು ಮಾರುಕಟ್ಟೆ ವ್ಯವಸ್ಥೆ ಸ್ಪರ್ಧಾಕ್ಷೀಣವಾಗಿದೆ.

ಮೇಲಿನ ಕೃಷಿ ಮಾರುಕಟ್ಟೆಯ ಅಸಮರ್ಥತೆ ಮತ್ತು ಅಪೂರ್ಣತೆಗಳನ್ನು ಗುರುತಿಸಿ, ಲೋಕಸಭೆ ಇತ್ತೀಚೆಗೆ ರೈತರಿಗೆ ತಮ್ಮ ಉತ್ಪನ್ನಗಳನ್ನು ಎಪಿಎಂಸಿ ಮಾರುಕಟ್ಟೆ ಆವರಣದ ಮಿತಿಯನ್ನು ಮೀರಿ ಮಾರಾಟ ಮಾಡಲು ರೈತರಿಗೆ ಸ್ವಾತಂತ್ರ್ಯವನ್ನು ಒದಗಿಸುವ ಹೊಸ ಕಾಯ್ದೆಯನ್ನು ಜಾರಿಗೆ ತಂದಿತು. ಇದರ ಜತೆಗೆ, ಗುತ್ತಿಗೆ ಕೃಷಿಗೆ

ಸಂಬಂಧಿಸಿದ ಒಂದು ಸುಗ್ರೀವಾಜ್ಞೆಯು ರೈತರಿಗೆ ಬೆಲೆಯನ್ನು ಹಾಗೂ ಮಾರುಕಟ್ಟೆ ಖಚಿತಗೊಳಿಸುತ್ತದೆ. ಇನ್ನೊಂದು ತಿದ್ದುಪಡಿ ಅಗತ್ಯ ಸರಕುಗಳ ಕಾಯ್ದೆಗೆ ಸಂಬಂಧಿಸಿದ್ದು ಉದ್ಯಮಿಗಳು ಹೆಚ್ಚಿನ ಸಂಸ್ಕರಣೆ, ರಫ್ತು ಮತ್ತು ವ್ಯಾಪಾರ ಉದ್ದೇಶಗಳಿಗಾಗಿ ಸ್ಟಾಕ್ ಮಾಡಲು, ಮಾರುಕಟ್ಟೆಯಲ್ಲಿ ಪ್ರಮಾಣದ ಆರ್ಥಿಕತೆಯನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಹೊಸ ಕಾನೂನುಗಳನ್ನು ಪರಿಶೀಲನೆ ಮತ್ತು ರೈತರಿಗೆ ಅವುಗಳ ಪರಿಣಾಮಗಳನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶ.


## I. ರೈತರ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ (ಪ್ರಚಾರ ಮತ್ತು ಸೌಲಭ್ಯ) ಕಾಯ್ದೆ, 2020

ಈ ಹೊಸ ಕಾಯಿದೆಯು ರೈತರಿಗೆ ಮತ್ತು ಖರೀದಿದಾರರಿಗೆ ಮಾರುಕಟ್ಟೆಯಲ್ಲಿ ಪರ್ಯಾಯ ವ್ಯಾಪಾರ ಮಾರ್ಗಗಳ ಮೂಲಕ ಸ್ಪರ್ಧಾತ್ಮಕ ಬೆಲೆಗಳು ದೊರಕುವಂತೆ ಅನುವಾಗುತ್ತದೆ. ಹಾಗೂ ಪರಿಣಾಮಕಾರಿ, ಪಾರದರ್ಶಕ ಮತ್ತು ತಡೆರಹಿತ ಮುಕ್ತ ಚಲನೆ ಮತ್ತು ರೈತರ ಉತ್ಪನ್ನಗಳನ್ನು ಎಲ್ಲಿಯಾದರೂ ಮಾರಿ, ಎಲೆಕ್ಟ್ರಾನಿಕ್ ವ್ಯಾಪಾರಕ್ಕಾಗಿ ಕೂಡ ಅನುಕೂಲಕರ ಚೌಕಟ್ಟನ್ನು ಸಹ ಒದಗಿಸುತ್ತದೆ. ಕೃಷಿ ಉತ್ಪಾದನಾ ಮಾರುಕಟ್ಟೆ ಸಮಿತಿಗಳಲ್ಲಿ (ಎಪಿಎಂಸಿ) ಒಲಿಗೊಪ್ಸೋನಿ ಮಾರುಕಟ್ಟೆಗೆ ಕಾರಣವಾಗುವ ಸೀಮಿತ ಸಂಖ್ಯೆಯ ವ್ಯಾಪಾರಿಗಳು ಮಾತ್ರ ಕಾರ್ಯನಿರ್ವಹಿಸುತ್ತಾರೆ, ಅಲ್ಲಿ ಕೆಲವೇ ಕೆಲವು ಖರೀದಿದಾರರಿಗೆ ಅತಿ ಹೆಚ್ಚಿನ ಸಂಖ್ಯೆಯ ಮಾರಾಟಗಾರರು (ರೈತರು) ಮಾರಾಟ ಮಾಡಬೇಕಾಗುತ್ತದೆ. ಹೀಗಾಗಿ ಇಲ್ಲಿ ರೈತರ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆಗಳ ಅವಕಾಶ ಕಡಿಮೆ. ಏಕೆಂದರೆ ವ್ಯಾಪಾರಿಗಳು ಮತ್ತು ಏಜೆಂಟರು ಅನೌಪಚಾರಿಕ ಕಾರ್ಟೆಲ್‌ಗಳನ್ನು ರಚಿಸುತ್ತಾರೆ. ಎಪಿಎಂಸಿ ಕಾಯ್ದೆ 1965 ಪ್ರಕಾರ, ರೈತರು ತಮ್ಮ ಉತ್ಪನ್ನಗಳನ್ನು ಎಪಿಎಂಸಿಗಳ ಪರವಾನಗಿ ಪಡೆದ ವ್ಯಾಪಾರಿಗಳಿಗೆ ಮಾತ್ರ ಮಾರಾಟ ಮಾಡಬೇಕು ಮತ್ತು ಎಪಿಎಂಸಿಗಳ ಹೊರಗಿನ ಬೇರೆಯವರಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ನಿರ್ಬಂಧಿಸಲಾಗುತ್ತಿದೆ. ಇದಲ್ಲದೆ, ಎಪಿಎಂಸಿ ಪರವಾನಗಿ ಪಡೆದ ವ್ಯಾಪಾರಿಗಳನ್ನು ಹೊರತುಪಡಿಸಿ, ಎಪಿಎಂಸಿ ಕಾಯ್ದೆಯ ಪ್ರಕಾರ ಯಾರೂ ರೈತರಿಂದ ಉತ್ಪನ್ನಗಳನ್ನು ಖರೀದಿಸಲು ಸಾಧ್ಯವಿಲ್ಲ. ಹೀಗಾಗಿ, ರೈತರು ತಮ್ಮ ಉತ್ಪನ್ನಗಳನ್ನು ಫಾರ್ಮ್ ಗೇಟ್‌ಗಳು, ಕಾರ್ಖಾನೆಯ ಆವರಣ, ಗೋದಾಮುಗಳು, ಸಿಲೋಸ್, ಕೋಲ್ಡ್ ಸ್ಟೋರೇಜ್‌ಗಳಲ್ಲಿ ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ರಾಜ್ಯದ ಒಳಗೆ ಅಥವಾ ಹೊರಗಿನ ವ್ಯಕ್ತಿಗಳು, ಕಂಪನಿಗಳು ಅಥವಾ ಸಹಕಾರಿ ಸಂಸ್ಥೆಗಳಿಗೆ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ. ಉದಾಹರಣೆಗೆ ರಾಷ್ಟ್ರೀಯ ತೋಟಗಾರಿಕಾ ಮಿಷನ್ ನಲ್ಲಿ ದೊಡ್ಡ ದೊಡ್ಡ ಶೀತಲ ಸಂಗ್ರಹಣೆ ಕೇಂದ್ರಗಳನ್ನು ನಿರ್ಮಿಸಲು ಸರ್ಕಾರವೇ ಸಹಾಯ ಮಾಡಿ, ಇವುಗಳಿಗೆ ರೈತರು ಮಾರಾಟ ಮಾಡಲು, ಎಪಿಎಂಸಿ ಕಾನೂನಿನಿಂದ ಸಾಧ್ಯವಾಗುತ್ತಿರಲಿಲ್ಲ.

## ಗ್ರಾಹಕರು ಕೊಡುವ ಬೆಲೆಯಲ್ಲಿ ರೈತರ ಅತಿ ಕಡಿಮೆ ಪಾಲು

ಭಾರತದಲ್ಲಿನ ರೈತರ ಭವಿಷ್ಯವು ಮುಂಗಾರು ಹಿಂಗಾರು (ನೈಸರ್ಗಿಕ) ಮತ್ತು ಮಾರುಕಟ್ಟೆಗಳ (ಮಾನವ ನಿರ್ಮಿತ) ನಡುವೆ ನಿರ್ಧರಿಸಲ್ಪಡುತ್ತದೆ. ಇವೆರಡೂ ರೈತರಿಗೆ ಪ್ರತಿಕೂಲವಾಗಿವೆ. ಸಾಮಾನ್ಯವಾಗಿ ಕೃಷಿ ಸರಕುಗಳು ಮತ್ತು ನಿರ್ದಿಷ್ಟವಾಗಿ ಆಹಾರ ಉತ್ಪನ್ನಗಳು ಅನಿರ್ದಿಷ್ಟ ಬೇಡಿಕೆ ಮತ್ತು ಅನಿರ್ದಿಷ್ಟ ಪೂರೈಕೆಯಿಂದ ನಿರೂಪಿಸಲ್ಪಟ್ಟಿರುವುದರಿಂದ, ಅವು ಕೃಷಿ ಮತ್ತು ಮಾರಾಟದಲ್ಲಿ ನಿರ್ಬಂಧಗಳನ್ನು ಹೇರುತ್ತವೆ. ಆದ್ದರಿಂದ, ರೈತರು ಕೃಷಿಯಲ್ಲಿ ಬೆಲೆ ತೆಗೆದುಕೊಳ್ಳುವ ವ್ಯಕ್ತಿಯಾಗಿರುತ್ತಾರೆ. ಆದರೆ ಕೈಗಾರಿಕೆ ಅಥವಾ ಸೇವಾ ಕ್ಷೇತ್ರದ

ಉದ್ಯಮಿಯೊಂದಿಗೆ ಹೋಲಿಸಿದರೆ ಅಲ್ಲಿ ಉದ್ಯಮಿಯು ಬೆಳೆಯನ್ನು ನಿರ್ಧಾರ ಮಾಡುವ ಶಕ್ತಿ ಹೊಂದಿರುತ್ತಾರೆ. ಇದಕ್ಕೆ inelastic demand ಹಾಗೂ inelastic supply ಎನ್ನುತ್ತಾರೆ. ಕೆಲಮಟ್ಟಿಗೆ ಇವುಗಳನ್ನು ನೀರಾವರಿ ಸೌಲಭ್ಯ, ಬೆಳೆ ವಿಮೆ, ಹಾಗೂ ಇತರೆ ವೈಜ್ಞಾನಿಕ ಕೃಷಿಯಿಂದ ಸ್ವಲ್ಪ ಮಟ್ಟಿಗೆ ಪರಿಹರಿಸಲಾಗುತ್ತದೆ. ಆದಾಗ್ಯೂ, ಕೃಷಿ ಮಾರುಕಟ್ಟೆಗಳ ಅಸ್ತಿತ್ವದ 60 ವರ್ಷಗಳ ನಂತರವೂ ಈ ಅಸಮರ್ಥತೆ ಮುಂದುವರೆದಿದೆ. ಆದ್ದರಿಂದ ಒಂದು ಕಡೆ ನಿಯಂತ್ರಿತ ಮಾರುಕಟ್ಟೆಗಳಲ್ಲಿ ನಿರ್ಬಂಧಗಳು ಮತ್ತು ಮತ್ತೊಂದೆಡೆ ಮಧ್ಯವರ್ತಿಯಿಂದ ನಿರಂತರ ಶೋಷಣೆ ಇವುಗಳ ಮಧ್ಯ ರೈತರು ತತ್ತರಿಸಿ ಹೋಗಿದ್ದಾರೆ. ಭತ್ತದಲ್ಲಿ ರೈತರು ಗ್ರಾಹಕ ರೂಪಾಯಿಯ ಶೇಕಡಾ 50 ಕ್ಕಿಂತ ಕಡಿಮೆ ಪಡೆಯುತ್ತಿದ್ದಾರೆ. ಹೀಗಾಗಿ, ಎಪಿಎಂಸಿಗಳು ಮಾರುಕಟ್ಟೆಗೆ ಬರುವ ಉತ್ಪಾದನೆಯ ಶೇಕಡಾ 50 ಕ್ಕಿಂತ ಹೆಚ್ಚು ಆಕರ್ಷಿಸಲು ಸಾಧ್ಯವಾಗುತ್ತಿಲ್ಲ (ಚಿತ್ರ ೧)




ಚಿತ್ರ ೧: ವಿವಿಧ ಬೆಳೆಗಳಲ್ಲಿ ಗ್ರಾಹಕರ ಕೊಡುವ ಬೆಲೆಯಲ್ಲಿ ರೈತರ ಪಾಲು (ಶೇಕಡಾ)

Source: Bhoi, B.B., Sujata Kundu, Vimal Kishore and Suganti, D, Supply chain dynamics and food inflation in India, RBI Bulletin, Oct 2019, pp. 95-111.

ಮಾರುಕಟ್ಟೆ ಅಸಮರ್ಥತೆ ಮತ್ತು ಮಾರುಕಟ್ಟೆ ಅಪೂರ್ಣತೆಯ ಮುಖ್ಯ ಅಂಶವೆಂದರೆ, ಮಾರುಕಟ್ಟೆಯಲ್ಲಿ ಕೆಲವೇ ಖರೀದಿದಾರರಿದ್ದು, ಅವರಿಗೆ ಹೆಚ್ಚಿನ ಸಂಖ್ಯೆಯ ಮಾರಾಟಗಾರರು (ರೈತರು) ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲೇಬೇಕಾದ ಸ್ಥಿತಿ. ಇದಕ್ಕೆ ಒಲಿಗೊಪ್ಸೋನಿ ಮಾರುಕಟ್ಟೆ ಎನ್ನುತ್ತಾರೆ. ಈ ಮಾರುಕಟ್ಟೆಗಳು ಸ್ಪರ್ಧಾತ್ಮಕವಾಗಿರುವುದಿಲ್ಲ.ಏಕೆಂದರೆ (1) ಕೆಲವು ವ್ಯಾಪಾರಿಗಳಲ್ಲಿ ಆಲಿಗೋಪ್ಸೋನಿಕ್ ಸ್ಪರ್ಧೆಯಿಂದಾಗಿ ಆಗಾಗ್ಗೆ ಕಾರ್ಟೆಲ್‌ಗಳನ್ನು ರೂಪಿಸುವ ಪರಿಣಾಮವಾಗಿ ಸ್ಪರ್ಧಾತ್ಮಕ ಬೆಲೆಗಳನ್ನು ನೀಡಲು ವಿಫಲವಾಗುತ್ತದೆ ಮತ್ತು ರೈತರು ಒಳ್ಳೆಯ ಸಂಭಾವನೆ ಬೆಲೆಯನ್ನು ಪಡೆಯುವಲ್ಲಿ ವಿಫಲರಾಗುತ್ತಾರೆ ಮತ್ತು ಗ್ರಾಹಕರ ಕೊಡುವ ರೂಪಾಯಿಯ ಅತಿ ಸಣ್ಣ ಪಾಲನ್ನು ಪಡೆಯುತ್ತಾರೆ, (2) ಹೆಚ್ಚಿನ ಸಂಖ್ಯೆಯ ಅತಿಯಾದ ಮಧ್ಯವರ್ತಿಗಳ ಅಸ್ತಿತ್ವದಿಂದಾಗಿ ಪ್ರತಿ ಹಂತದಲ್ಲೂ ತಮ್ಮ ಖರ್ಚು ಹಾಗೂ ಲಾಭಾಂಶಗಳನ್ನು ಹೆಚ್ಚು ತೋರಿಸಿ ಹಾಗೂ ರೈತರಿಂದ ಕಮಿಷನ್ ಪಡೆದು ರೈತರಿಗೆ ಗ್ರಾಹಕರು ಕೊಡುವ ಬೆಳೆಯ ಅತಿ ಕಡಿಮೆ ಪಾಲು ಸಿಕ್ಕುತ್ತಿದೆ. ಉದಾಹರಣೆಗೆ, ಒಂದು ಬೆಳೆಯ ಚಿಲ್ಲರೆ ವ್ಯಾಪಾರದ ಬೆಲೆ ರೂ ಆರು ಆಗಿದ್ದರೆ, ಸಗಟು ವ್ಯಾಪಾರಿ ಈ ಬೆಲೆಯ ಶೇಕಡಾ 67ರಷ್ಟು, ಕಮಿಷನ್ ಏಜೆಂಟ್ ಚಿಲ್ಲರೆ ಬೆಲೆಯ ಶೇಕಡಾ 50 ರಷ್ಟು, ಮೂಲ ಹಂತದ ಕಮಿಷನ್ ಏಜೆಂಟ್ ಈ ಬೆಲೆಯ ಶೇಕಡಾ 37 ರಷ್ಟು, ಪ್ರಾಥಮಿಕ ಹಂತದ ದಳ್ಳಾಲಿ ಈ ಬೆಲೆಯ ಶೇಕಡಾ 30 ರಷ್ಟು, ಸಂಯೋಜಕ ರಿಗೆ ಈ ಬೆಲೆಯ ಶೇಕಡಾ 22 ರಷ್ಟು ಪಡೆದರೆ, ತನ್ನ

ಬೆವರು ಸುರಿಸಿ ಬೆಳೆ ಉತ್ಪಾದಿಸಿದ ರೈತರಿಗೆ ಈ ಚಿಲ್ಲರೆ ಬೆಲೆಯ ಕೇವಲ ಶೇಕಡಾ 17 ರಷ್ಟು ಮಾತ್ರ ದೊರೆಯುತ್ತಿದೆ ಎಂದರೆ ಎಂತಹ ವಿಪರ್ಯಾಸ.

<u>ಕಾಗೋಡು ಸತ್ಯಾಗ್ರಹ ಏಕೆ ನಡೆಯಿತು</u>

ರೈತರ ಬವಣೆಗಳಿಗೆ ಇತಿಹಾಸವೇ ಇದೆ.[1] ತೀರಾ ಇತ್ತೀಚಿನ ಅಂದರೆ 1951 ರ ಕಾಗೋಡು ಸತ್ಯಾಗ್ರಹ ಏಕೆ ನಡೆಯಿತು ಎಂಬುದನ್ನು ನೋಡಿದರೆ, ಈ ಸತ್ಯಾಗ್ರಹ ನಡೆದದ್ದು ಹೊರಗಿನ ವ್ಯಕ್ತಿಗಳಿಂದಾಗಲೀ ಅಂಶಗಳಿಂದಾಗಲೀ ಅಲ್ಲ. ಈ ಸತ್ಯಾಗ್ರಹವು ಗೇಣೀ ದಾರರ ಮೇಲೆ ಭೂ ಮಾಲೀಕರ ದಬ್ಬಾಳಿಕೆಯೊಂದಿಗೆ ಪ್ರಾರಂಭವಾಯಿತು. ಈ ಕಾಗೋಡು ಚಳುವಳಿ ಅಥವಾ ಕಾಗೋಡು ಸತ್ಯಾಗ್ರಹವು 1949 ರಿಂದ 1951 ರವರೆಗೆ ಸಾಗಿ ಸಾಗರ ತಾಲ್ಲೂಕು ಶಿವಮೊಗ್ಗ ಜಿಲ್ಲೆ ಕರ್ನಾಟಕದಲ್ಲಿದ್ದು ದೇಶದ ಗಮನ ಸೆಳೆಯಿತು. ಮುಖ್ಯ ಕಾರಣವೇನೆಂದರೆ ಇಲ್ಲಿಯ ಭೂಮಾಲೀಕರು ಗೇಣೀದಾರ ರೈತರಿಂದ ಗೇಣಿ ಪಡೆಯುವಾಗ ತಾವು ರೂಪಿಸಿದ ಹೆಚ್ಚಿನ ಪ್ರಮಾಣದ ಕೊಳಗದಲ್ಲಿಯೇ ಗೇಣೀ ಭತ್ತವನ್ನು ಅಳೆದು ಕೊಡಬೇಕಿತ್ತು. ಭೂ ಮಾಲೀಕರಿಗೆ ಗೇಣೀ ದಾರರು ಗೇಣೀ ಕೊಡುವಾಗ, ಗೇಣೀ ಭತ್ತವನ್ನು ಭೂಮಾಲೀಕರೇ ತಯಾರಿಸಿದ 3.5 ರಿಂದ 4 ಸೇರು ಅಳೆಯುವ ಕೊಳಗದಲ್ಲೇ ಕೊಡಬೇಕಿತ್ತು. ಆದರೆ ಸರ್ಕಾರದ ಪ್ರಕಾರ ಗೇಣೀ ಭತ್ತವನ್ನು ಮೂರು ಸೇರಿನ ಕೊಳಗದಲ್ಲಿ ಮಾತ್ರ ಕೊಡಬೇಕಿತ್ತು. ಇದಲ್ಲದೆಯೇ ಗೇಣೀ ರೈತರು, ಭೂಮಾಲೀಕರು ಬರುವಾಗ ದಾರಿಯಲ್ಲಿ ಮಳೆ ಬಂದರೆ ತಮ್ಮನ್ನು ಮಳೆಯಿಂದ ರಕ್ಷಿಸಲು ಛತ್ರಿ ಹಿಡಿಯಬಾರದಿತ್ತು, ಅವರ ಮುಂದೆ ಉಟ್ಟಿರುವ ಪಂಚೆಯು ತುಂಡಾಗಿ ಉಟ್ಟು, ತಗ್ಗಿ ಬಗ್ಗಿ ನಡೆಯಬೇಕು, ಇತ್ಯಾದಿ ಇತ್ಯಾದಿ ಶೋಷಣೆ ಯಾಗುತ್ತಿತ್ತು. ಹೀಗಾಗಿ ಗೇಣೀ ರೈತರು ಬಂಡೆದ್ದರು ಹಾಗೂ ಈ ಚಳುವಳಿಗೆ ಶ್ರೀ ಶಾಂತವೇರಿ ಗೋಪಾಲಗೌಡರು, ಹಿರಿಯ ನಾಯಕರಾದ ಶ್ರೀ ರಾಮ ಮನೋಹರ ಲೋಹಿಯಾ ಮತ್ತಿತರೇ ಸಮಾಜವಾದಿಗಳು ಕೈ ಜೋಡಿಸಿ ರೈತರಿಗೆ ನ್ಯಾಯ ಸಿಕ್ಕುವಂತೆ ಹೋರಾಡಿದ್ದು ಈಗ ಇತಿಹಾಸದಲ್ಲಿ ಉಳಿದಿದೆ. ಹಾಗೂ ಈ ಚಳುವಳಿಯೇ ರಾಜ್ಯದಲ್ಲಿ 1961 ರ ಭೂಸುಧಾರಣಾ ಕಾನೂನು ಬರಲಿಕ್ಕೆ ನಾಂದಿಯಾಗಿದ್ದು ಗೇಣೀ ದಾರ ರೈತರ ಸಂರಕ್ಷಣೆ ಯಾಗಿದ್ದು ಸರ್ವವೇದ್ಯ. ಹೀಗಾಗಿ ಈಗ ಇದೇ ರೀತಿಯ ಶೋಷಣೆ ರೈತರ ಜಮೀನಿನಲ್ಲಿ ಇಲ್ಲದಿದ್ದರೂ ಮಾರುಕಟ್ಟೆಯಲ್ಲಿ ಮಂಡಿ ವ್ಯಾಪಾರಿಗಳು ರೈತರನ್ನು ಪರಿ ಪರಿಯಾಗಿ ಶೋಷಣೆಮಾಡುತ್ತಿದ್ದು, ರೈತರಿಗೆ ಈ ಮೂರೂ ಕಾನೂನುಗಳ ಮೂಲಕ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಫಲಕಾರಿಯಾಗಬಲ್ಲುದೆ ಎಂಬ ಆಶಾ ಭಾವನೆಯನ್ನು ಇಟ್ಟುಕೊಂಡು ಮುಂದುವರೆಯಬೇಕು. ಅತಿಯಾದ ಮಧ್ಯವರ್ತಿಗಳಿಂದ ಒಂದೆಡೆ ಮಾರುಕಟ್ಟೆಯ ವೆಚ್ಚವು ಹೆಚ್ಚುವುದಲ್ಲದೆ, ಮತ್ತೊಂದೆಡೆ ಗ್ರಾಹಕರು ಕೊಡುವ ಬೆಲೆಯಲ್ಲಿ ರೈತರ ಪಾಲು ಕಡಿಮೆಯಾಗಿ, ಅವರಿಗೆ ಕೃಷಿಯಲ್ಲಿ ಆಸಕ್ತಿ ಕ್ರಮೇಣ ಕ್ಷೀಣಿಸುವಂತೆ ಮಾಡುತ್ತದೆ.

<u>ರೈತರ ಕೈ ಕೆಸರಾದರೆ, ಬಾಯಿ ಮೊಸರು ಯಾರದ್ದು? ದಳ್ಳಾಳಿ, ಮಂಡಿ ಮರ್ಚೆಂಟ್ ಗಳದ್ದು</u>

ಮಧ್ಯವರ್ತಿಗಳು, ಗ್ರಾಹಕರು ಕೊಡುವ ಬೆಲೆಯ ಹೆಚ್ಚಿನ ಭಾಗವನ್ನು ನುಂಗಿ, ರೈತರಿಗೆ ತಲುಪಿಸುತ್ತಲೇ ಇರಲಿಲ್ಲ, ಹೀಗಾಗಿ <u>ಯಾರ ಕೈ ಕೆಸರು? ಯಾರ ಬಾಯಿ ಮೊಸರು?</u> ಯೋಚಿಸಬೇಕಾಗಿದೆ. <u>ಪ್ರಸ್ತುತ ಮಾರುಕಟ್ಟೆ ನಿಯಮಗಳ ವಿಶ್ಲೇಷಣೆಯಲ್ಲಿ ಕೈ ಕೆಸರಾದರೆ ಬಾಯಿ ಮೊಸರು</u> ಗಾದೆ ಪ್ರಸ್ತುತ. ಆದರೆ ಯಾರ ಕೈ ಕೆಸರು, ಯಾರ ಬಾಯಿ ಮೊಸರು,

---

[1]. ಎಂ ಜಿ ನಾಗರಾಜ್, ಕರ್ನಾಟಕ ರೈತ ಚಳುವಳಿ ಸತ್ಯಾಗ್ರಹಗಳು, ಸಹಸ್ರಮಾನ ಆರು ಸಂಪುಟಗಳು, ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ, ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ, ವಿಧಾನ ಸೌಧ, ಬೆಂಗಳೂರು, 2006. ಆರು ಸಂಪುಟಗಳಳ್ಳಿ ಲೇಖಕರು ರೈತ ಸತ್ಯಾಗ್ರಹಗಳ ಇತಿಹಾಸ ಹಾಗೂ ಸಂಸತ್ತಿನಲ್ಲಿ ರೈತರ ಸಮಸ್ಯೆಗಳನ್ನು ಚರ್ಚಿಸಿದ ವಿಷಯಗಳ ಕೂಲಂಕುಷ ಅಧ್ಯಯನವನ್ನು ಈ ಗ್ರಂಥಗಳಲ್ಲಿ ಮಂಡಿಸಿದ್ದಾರೆ

ವಿಶ್ಲೇಷಣೆ ಮುಖ್ಯ. ಈ ಎಪಿಎಂಸಿ ಮಾರ್ಕೆಟಿಂಗ್ ಕಾನೂನು ಬದಲಾಯಿಸುವ ಮುಂಚೆ, ರೈತರ ಕೈ ಕೆಸರಾದರೆ, ಮಧ್ಯವರ್ತಿಗಳ ಬಾಯಿ ಮೊಸರಾಗುತ್ತಿತ್ತು. ಏಕೆಂದರೆ, ರೈತರು ಎಷ್ಟೇ ಕಷ್ಟು ಪಟ್ಟು ತಮ್ಮ ಹೊಲ, ತರಿ ಜಮೀನುಗಳಲ್ಲಿ ಶ್ರಮ ವಹಿಸಿ ಉತ್ತಮ ಬೆಳೆ ಬೆಳೆದರೂ ಹಾಗೂ ಗ್ರಾಹಕರು ಉತ್ತಮ ಬೆಲೆ ಕೊಟ್ಟರೂ, ಮಧ್ಯವರ್ತಿಗಳು ರೈತರಿಗೆ ತಲುಪಿಸಬಹುದಾದ ಬೆಳೆಯ ಲಾಭಾಂಶ (ಮಾರ್ಜಿನ್) ತಲುಪಿಸುತ್ತಿರಲಿಲ್ಲ. ಹೀಗಾಗಿ ಎಷ್ಟೋ ಬಾರಿ ರೈತರು ತಾವು ಬೆಳೆದ ಪದಾರ್ಥವನ್ನು ಎಪಿಎಂಸಿ ಯಲ್ಲೋ, ರಸ್ತೆಯೆಲ್ಲೋ ಅತಿ ಬೇಸರದಿಂದ ತ್ಯಾಗ ಮಾಡಿ ಬಂದಿರುವ ನಿರ್ದರ್ಶನಗಳನ್ನು ಕೇಳಿದ್ದೇವೆ. ಆದರೆ ಎಪಿಎಂಸಿ ಕಾನೂನು ಬದಲಾಯಿಸಿ ರೈತರು ಯಾರಿಗಾದರೂ ಮಾರುವ ಸ್ವಾತಂತ್ರ ಸಿಕ್ಕಿದರೆ, ಕೈ ಕೆಸರು - ಬಾಯಿ ಮೊಸರು ಎರಡೂ ರೈತರದ್ದೆ ಆಗಬಹುದು ಎಂದು ಆಶಿಸೋಣ.

**<u>ಉದಾರೀಕರಣದಿಂದಾಗಿ ಕೃಷಿಯಲ್ಲಿ ಆರ್ಥಿಕ ದಕ್ಷತೆ</u>**

1991 ರಲ್ಲಿ ಆರ್ಥಿಕ ಉದಾರೀಕರಣದ ನಂತರ, ಭಾರತವು 1995 ರಲ್ಲಿ WTO ಗೆ ಪ್ರವೇಶಿಸಿತು. ಮುಕ್ತ ವ್ಯಾಪಾರವು ಸ್ಪರ್ಧಾತ್ಮಕ ಮತ್ತು ದಕ್ಷತೆಗೆ ಕಾರಣವಾಗುತ್ತದೆ ಎಂದು ನಿರೀಕ್ಷಿಸಲಾಗಿ ಅದರ ರೀತ್ಯ, ಭಾರತದಲ್ಲಿ ಕೃಷಿ ಉತ್ಪಾದನೆಯ ಒಟ್ಟು ಮೌಲ್ಯದ ಶೇಕಡಾ 10 ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಸಬ್ಸಿಡಿಗಳನ್ನು ನೀಡಲಾಗುತ್ತಿದೆ. ಪ್ರಸ್ತುತ, ಭಾರತದಲ್ಲಿ ಕೃಷಿಗೆ ಬೆಂಬಲವು (negative) ಋಣಾತ್ಮಕವಾಗಿದೆ. ಉದಾಹರಣೆಗೆ 2019 ರಲ್ಲಿ ಕೃಷಿಗೆ ಬೆಂಬಲವು ಒಟ್ಟು ಕೃಷಿ ಆದಾಯದಲ್ಲಿನ ಶೇಕಡಾ - 4.97 ಅಥವಾ ಶೇಕಡಾ ಮೈನಸ್ 5 ರಷ್ಟಾಗಿದೆ[2] (Indian farmers are net taxed to the extent of 5 percent). ಅಂದರೆ ಕೃಷಿ ಆದಾಯ ನೂರು ರೂಪಾಯಿ ರೈತರಿಗೆ ಬಂದರೆ, ಆ ಆದಾಯದಿಂದ ರೈತರೇ ಸರ್ಕಾರಕ್ಕೆ ಐದು ರೂಪಾಯಿಗಳ ತೆರಿಗೆ ಕೊಟ್ಟಹಾಗೆ ಆಗುತ್ತಿದೆ. ಆದರೇ ಅಮೇರಿಕಾದಲ್ಲಿ ರೈತರಿಗೆ ತಮ್ಮ ಕೃಷಿ ಆದಾಯದ ಶೇಕಡಾ 13 ರಷ್ಟು ಬೆಂಬಲ ಕೊಡಲಾಗುತ್ತಿದೆ. ಆದ್ದರಿಂದ ಉದಾರೀಕರಣವು ಎಪಿಎಂಸಿ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಸ್ಪರ್ಧೆಯನ್ನು ಹೆಚ್ಚಿಸಲು ಕಟ್ಟುನಿಟ್ಟಿನ ನಿಯಮಗಳಿಂದಾಗಿ ಆಗಲಿಲ್ಲ. ಏಕೆಂದರೆ ಎಪಿಎಂಸಿಗಳಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ಎಪಿಎಂಸಿ ವ್ಯಾಪಾರಿಗಳಿಗೆ ಮಾತ್ರ ಮಾರಾಟ ಮಾಡಬೇಕಾಗಿತ್ತು. ಆದ್ದರಿಂದ ಎಪಿಎಂಸಿ ಯಲ್ಲಿ ಬೆಲೆ ರಚನೆಯು ಸ್ಪರ್ಧಾತ್ಮಕ ವಾಗುತ್ತಿರಲಿಲ್ಲ. ಅನೌಪಚಾರಿಕ ಕಾರ್ಟೆಲ್‌ಗಳಿಂದಾಗಿ ಬೆಲೆಗಳು ಸ್ಥಗಿತವಾಗಿ ರೈತರಿಗೆ ಸ್ಪರ್ಧಾತ್ಮಕ ಬೆಲೆಗಳು ಸಿಕ್ಕುತ್ತಿರಲಿಲ್ಲ. 2019 ರಲ್ಲಿ ಕೃಷಿಯಲ್ಲಿನ ಒಟ್ಟಾರೆ Nominal Protection Coefficient (NPC) 0.87 ಆಗಿದ್ದು, ನಮ್ಮ ರೈತರು ಅವರ ಪದಾರ್ಥ ವನ್ನು ರಫ್ತು ಮಾಡಿದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮ ರೈತರ ಪದಾರ್ಥಕ್ಕೆ ಸರಾಸರಿ ಶೇಕಡಾ 13 ರಷ್ಟು ಹೆಚ್ಚಿನ ಬೆಲೆಯನ್ನು ಪಡೆದುಕೊಳ್ಳಬಹುದು ಎಂದು ಸೂಚಿಸುತ್ತದೆ. ಆದರೆ ಆಂತರಿಕ ಮಾರುಕಟ್ಟೆಗಳೇ ಸ್ಪರ್ಧಾತ್ಮಕವಾಗಿಲ್ಲದಿರುವುದರಿಂದ, ರಫ್ತು ಮಾರುಕಟ್ಟೆ ಯಲ್ಲಿ ರೈತರು ಹೆಚ್ಚಿನ ಲಾಭಾಂಶವನ್ನು ಗಳಿಸಬಲ್ಲರೇ ಎಂಬುದಕ್ಕೆ ಈಗ ಸರಕಾರವು ತಂದಿರುವ ಮೂರು ಕೃಷಿ ನಿಯಮಗಳಿಂದಾಗಿ ಸಾಧ್ಯವಾಗುತ್ತದೆ. ಉದಾಹರಣೆಗೆ ಪ್ರಸ್ತುತ ಭಾರತವು ವಿಶ್ವದ ಅತಿಹೆಚ್ಚಿನ ಅಕ್ಕಿ ರಫ್ತು ಮಾಡುವ ದೇಶವಾಗಿದೆ.

**<u>ಬೆಳೆಗಳಲ್ಲಿ ಆರ್ಥಿಕ ದಕ್ಷತೆ</u>**

ಯಾವದೇ ಪದಾರ್ಥಕ್ಕೆ ದೇಶದಲ್ಲಿ ಸಿಕ್ಕುವ ಬೆಲೆ ಹಾಗೂ ಅದೇ ಪದಾರ್ಥಕ್ಕೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಿಕ್ಕು ಬೆಲೆ ಯನ್ನು ಹೋಲಿಸಿ ದಾಗ, NPC - Nominal Protection Coefficient (=domestic price divided by

---

[2] https://data.oecd.org/agrpolicy/producer-protection.htm#indicator-chart;

international price) ಈ ಗುಣಾಂಕ ಒಂದಕ್ಕಿಂತ ಕಡಿಮೆ ಇದ್ದರೆ, ಆ ಪದಾರ್ಥವನ್ನು ನಮ್ಮ ರೈತರು ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಿದರೆ ಆಂತರಿಕ ಬೆಲೆ ಗಿಂತ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಬೆಲೆ ಪಡೆಯಬಹುದು. ಉದಾರೀಕರಣದ ನಂತರದ NPC ಗಳ ವಿಶ್ಲೇಷಣೆ[3] ಮಾಡಿದಾಗ ಕಂಡು ಬರುವ ಅಂಶವೇನೆಂದರೆ, ಗೋಧಿ (೦. ೯೩), ಅಕ್ಕಿ (೦. ೮೦), ಮುಸುಕಿನ ಜೋಳ (೦. ೯೫), ಕಡಲೇ ಬೇಳೆ (೦. ೮೬), ಸಾಸುವೆ (೦. ೮೬), ಸೋಯಾಬೀನ್ (೦. ೯೯), ಕಡಲೇಕಾಯಿ (೦. ೬೭), ಹಾಲಿನ ಪುಡಿ (೦. ೯೭), ದನದ ಮಾಂಸ (೦. ೭೭), ಹತ್ತಿ (೦. ೮೨), ಆಲೂಗೆಡ್ಡೆ (೦. ೭೯), ಬಾಳೆಹಣ್ಣು (೦. ೬೧), ಈರುಳ್ಳಿ (೦. ೪೪) ಇವುಗಳನ್ನು ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಿದಾಗ ಆಂತರಿಕ ಬೆಲೆಗಿಂತ (ಒಂದರಲ್ಲಿ ಕಳೆದು ಬರುವ ಅಂಶದಷ್ಟು) ಹೆಚ್ಚಿನ ಬೆಲೆ ಪಡೆಯಬಹುದಾಗಿದೆ. ಉದಾಹರಣೆಗೆ ಗೋಧಿ ಮಾರಿದರೆ ಶೇಕಡಾ ೭ ರಷ್ಟು, ಅಕ್ಕಿ ಮಾರಿದರೆ ಶೇಕಡಾ ೨೦ ರಷ್ಟು, ಮುಸುಕಿನ ಜೋಳ ಶೇಕಡಾ ೫ ರಷ್ಟು, ಕಡಲೆಬೇಳೆ ಶೇಕಡಾ ೧೪ ರಷ್ಟು, ಕಡಲೇಕಾಯಿ ಶೇಕಡಾ ೩೩ ರಷ್ಟು, ಹತ್ತಿ ಶೇಕಡಾ ೧೮ ರಷ್ಟು, ಆಲೂಗೆಡ್ಡೆ ಶೇಕಡಾ ೨೧ ರಷ್ಟು, ಬಾಳೆಹಣ್ಣು ಶೇಕಡಾ ೩೯ರಷ್ಟು ಈರುಳ್ಳಿ ಶೇಕಡಾ ೬೬ ರಷ್ಟು ಆಂತರಿಕ ಬೆಲೆಗಿಂತ ಹೆಚ್ಚಿನ ಬೆಲೆ ಪಡೆಯಬಹುದಾಗಿದೆ. ನಮಲ್ಲಿ ಉತ್ಪಾದಿಸುವ ಸಕ್ಕರೆ ಹಾಗೂ ಮಾವಿನ ಬೆಳೆಗಳಿಗೆ ರಫ್ತಿನಿಂದ ಹೆಚ್ಚು ಪ್ರಯೋಜನವಿಲ್ಲ ಏಕೆಂದರೆ, ಇವುಗಳಿಗೆ ಆಂತರಿಕ ಬೆಲೆಯೇ ಅಂತರ ರಾಷ್ಟ್ರೀಯ ಬೆಲೆಗಳಿಗಿಂತ ಹೆಚ್ಚಾಗಿದೆ. ಇದನ್ನು ಇನ್ನೊಂದು ರೀತಿ ವಿಶ್ಲಯಿಸಿದಾಗ ಬರುವ ಅಂಶವೇನೆಂದರೆ ಸಕ್ಕರೆಗೆ ನಾವು ಶೇಕಡಾ ೭ ರಷ್ಟು ಆರ್ಥಿಕ ಸಂರಕ್ಷಣೆ ಯನ್ನು ನೀಡುತ್ತಿದ್ದೇವೆ ಆದ್ದರಿಂದ ಭಾರತವು ಸಕ್ಕರೆ ಉತ್ಪಾದನೆಯ ಆರ್ಥಿಕ ದಕ್ಷತೆಯನ್ನು ಹೊಂದಿಲ್ಲವಾಗಿದೆ. ಮೆಕ್ಕೆ ಜೋಳ, ಸೋಯಾಬೀನ್ ಮತ್ತು ಹಾಲಿನ ಪುಡಿ, ಸರಕುಗಳಿಗೆ,NPC ಗುಣಾಂಕ ಒಂದಕ್ಕೆ ಸಾಕಷ್ಟು ಹತ್ತಿರದಲ್ಲಿದೆ. ಗೋಧಿ, ಸರಾಸರಿ ಗುಣಾಂಕ 0.93 ಹೊಂದಿರುವುದರು ಎಂದರೆ, ಶೇಕಡಾ ೭ ರಷ್ಟು ಮಾತ್ರ ತೆರಿಗೆ ವಿಧಾಸಲಾಗಿದೆ. ಇತರ ಪ್ರಮುಖ ಬೆಳೆಗಳಿಗೆ, ಅಂದರೆ ಅಕ್ಕಿ (ಸಾಮಾನ್ಯ) ಕ್ಕೆ 20 ಪ್ರತಿಶತ ಮತ್ತು ಆಲೂಗಡ್ಡೆಗೆ 21 ಪ್ರತಿಶತ ತೆರಿಗೆ ವಿಧಿಸಲಾಗಿದೆ. ದನದ ಮಾಂಸಕ್ಕೆ ಸರಾಸರಿ 23 ಪ್ರತಿಶತ ತೆರಿಗೆ ವಿಧಿಸಿದರೆ, ನೆಲಗಡಲೆಗೆ 33 ಪ್ರತಿಶತದಷ್ಟು ತೆರಿಗೆ ವಿಧಿಸಲಾಗಿದೆ. ಬಾಳೆಹಣ್ಣುಗಳಿಗೆ ಸರಾಸರಿ 39 ಪ್ರತಿಶತದಷ್ಟು ಮತ್ತು ಈರುಳ್ಳಿಗೆ 56 ಪ್ರತಿಶತದಷ್ಟು ತೆರಿಗೆ ವಿಧಿಸಲಾಗಿದೆ.

**ಕೃಷಿಯ ಆದಾಯ ದ್ವಿಗುಣಗೊಳಿಸುವ ಹೆಜ್ಜೆ**

ಹೀಗಾಗಿ, ನಮ್ಮ ರೈತರಿಗೆ ಈ 13 ಕೃಷಿ ಸರಕುಗಳಿಗೆ ಎನ್‌ಪಿಸಿ ಗುಣಾಂಕ ಒಂದಕ್ಕಿಂತ ಕಡಿಮೆ ಸೂಚಿಸುವ ಅಂಶವೆಂದರೆ, ರಫ್ತು ಮಾಡುವ ಮೂಲಕ ದೇಶೀಯ ಮಾರುಕಟ್ಟೆಗಿಂತ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗಳನ್ನು ಪಡೆಯಬಹುದಾಗಿ ಮತ್ತು ಇದನ್ನು ಸಕ್ರಿಯಗೊಳಿಸಲು, ನಮ್ಮ ದೇಶೀಯ ಮಾರುಕಟ್ಟೆಗಳು ಸ್ಪರ್ಧಾತ್ಮಕವಾಗಿರಬೇಕು. ಹೊಸ ಕಾಯಿದೆಯು ರೈತರನ್ನು ಎಪಿಎಂಸಿ ಮಧ್ಯವರ್ತಿಗಳ ಹಿಡಿತದಿಂದ ಮುಕ್ತಗೊಳಿಸಿ ಮತ್ತು ಯಾವುದೇ ಸ್ಥಳದಲ್ಲಿ ಯಾರಿಗಾದರೂ ಉತ್ಪನ್ನಗಳನ್ನು ರೈತರ ಆಯ್ಕೆಯ ಯಾವುದೇ ಖರೀದಿದಾರರಿಗೆ ಮಾರಾಟ ಮಾಡಲು ಸ್ವಾತಂತ್ರವಿರುವಿದರಿಂದ ಸ್ಪರ್ಧಾತ್ಮಕ ಬೆಲೆಗಳನ್ನೂ ಪಡೆಯಬಹುದು ಹಾಗೂ ಅವರ ಕೃಷಿಯ ಆದಾಯವನ್ನು ಸುಲಭವಾಗಿ ದ್ವಿಗುಣಗೊಳಿಸುವದರಲ್ಲಿ ಮುಂದಿನ ಹೆಜ್ಜೆ ಇಡಬಹುದಾಗಿದೆ.

---

[3] Shweta Saini and Ashok Gulati, 2017, Price Distortions in Indian Agriculture, World Bank, Washington DC., https://think-asia.org/bitstream/handle/11540/7537/Price_Distortions_in_Indian_Agriculture_2017.pdf?sequence=1

ಕರ್ನಾಟಕದಲ್ಲಿ, ಕನಿಷ್ಠ ಬೆಂಬಲ ಬೆಲೆಯ ಪ್ರಭಾವವು ವಿಭಿನ್ನವಾಗಿದೆ. ಮೊದಲನೆಯದಾಗಿ, ಎಪಿಎಂಸಿಯಲ್ಲಿ ಮಾರಾಟದ ಪ್ರಮಾಣವು ಶೇಕಡಾ ೩೦ ರಷ್ಟಿದೆ ಮತ್ತು ಎರಡನೆಯದಾಗಿ ಶೇಕಡಾವಾರು ಹೆಚ್ಚಿನ ಉತ್ಪನ್ನಗಳು ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚಿನ ಬೆಲೆಯನ್ನು ಪಡೆಯುವುದರಲ್ಲಿ ಯಶಸ್ಸನ್ನು ಗಳಿಸಿವೆ. ೨೦೦೮ ರಲ್ಲಿ ಎಪಿಎಂಸಿ ಮಾರುಕಟ್ಟೆಗಳಲ್ಲಿ ಶೇಕಡಾ 30 ಕ್ಕಿಂತ ಹೆಚ್ಚು ಧಾನ್ಯಗಳು, ಬೇಳೆಕಾಳುಗಳು, ತರಕಾರಿಗಳನ್ನು ಮಾರಾಟ ಮಾಡಲಾಯಿತು ಮತ್ತು ಶೇಕಡಾ 60 ರಷ್ಟು ಉತ್ಪನ್ನಗಳು ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚಿನ ಬೆಲೆ ಪಡೆದವು. ಎಪಿಎಂಸಿ ಮಾರುಕಟ್ಟೆಗಳಲ್ಲಿನ ಅದಕ್ಷತೆ ಹಾಗೂ ಅಪೂರ್ಣತೆಗಳ ಕಾರಣದಿಂದಾಗಿ ಶೇಕಡಾ 70 ರಷ್ಟು ಉತ್ಪನ್ನಗಳು ಎಪಿಎಂಸಿಯ ಹೊರಗಡೆಯೇ ವ್ಯಾಪಾರವಾಗಿದ್ದು ಗಮನಾರ್ಹ. ಹೀಗಾಗಿ, ರೈತರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು, ಮಾರುಕಟ್ಟೆ ಸುಧಾರಣೆಗಳು ನಿರ್ಣಾಯಕ.

**ರೈತರು ಮಾರುಕಟ್ಟೆಯಲ್ಲಿ ತಾವೇ ಬೆಲೆ ನಿರ್ಧರಿಸಬಹುದೇ ?**

ರೈತರು ಸದಾ ಮಾರುಕಟ್ಟೆಯಲ್ಲಿ ಬೆಲೆ ಯನ್ನು ಬೇಡಬೇಕಾಗಿದೆ (as price takers) ಹಾಗೂ ಎಂದೂ ಬೆಲೆಯನ್ನು ತಾವೇ ನಿರ್ಧರಿಸುವುದು (as price makers) ಸಾಧ್ಯವಾಗುತ್ತಿಲ್ಲ ಎಂಬು ದೂರು ರೈತರಿಂದ ಸರ್ವೇ ಸಾಮಾನ್ಯವಾಗಿದೆ. ಕಳೆದ 18 ವರ್ಷಗಳಿಂದ ಲೋಕಸಭೆ ಮತ್ತು ಹಲವಾರು ರಾಜ್ಯ ಶಾಸಕಾಂಗಗಳಲ್ಲಿ ಎಪಿಎಂಸಿ ಕಾಯ್ದೆಯನ್ನು ಸುಧಾರಿಸಲು ಚರ್ಚೆಗಳು ನಡೆಯುತ್ತಿದ್ದವು. ಡಾ ಎಂ ಎಸ್ ಸ್ವಾಮಿನಾಥನ್ ವರದಿಯಲ್ಲೂ ಕೂಡ ಎಪಿಎಂಸಿ ಕಾಯ್ದೆಯನ್ನು ರೈತ ಸ್ನೇಹಿ ಮಾಡಬೇಕೆಂದು ಶಿಫಾರಸು ಮಾಡಲಾಗಿದೆ. ಇದಕ್ಕನುಗುಣವಾಗಿ ೨೦೨೦ರ ಎಪಿಎಂಸಿ ಹೊಸ ಕಾಯ್ದೆಯಲ್ಲಿ, ರೈತ / ರೈತರ ಉತ್ಪನ್ನಗಳನ್ನು ಸಂಯೋಜಿಸುವ ಮೂಲಕ ರೈತರೇ ವ್ಯಾಪಾರಿಗಳಾಗಬಹುದು (PAN ಕಾರ್ಡ್ ಇದ್ದಲ್ಲಿ). ಹೊಸ ಕಾಯಿದೆಯು ರೈತರಿಗೆ ಮಾರಾಟ ಮಾಡಲು ಅನೇಕ ಸಾಧ್ಯತೆಗಳನ್ನು ಒದಗಿಸುವ ಮೂಲಕ ರೈತರಿಗೆ ತಮ್ಮ ಉತ್ಪನ್ನಗಳನ್ನು ಅವರಿಗೆ ಇಚ್ಛೆ ಬರುವ ವ್ಯಕ್ತಿಗಳಿಗೆ, ಅವರಿಗೆ ಇಚ್ಛೆ ಇರುವ ಮಾರುಕಟ್ಟೆ ಅಥವಾ ಬೇರೆ ಜಾಗಗಳಲ್ಲಿ ಮಾರಾಟ ಮಾಡಲು ಸ್ವತಂತ್ರ ಅಧಿಕಾರ ನೀಡುತ್ತದೆ. ಹೀಗಾಗಿ ರೈತರು ತಮ್ಮ ಆರ್ಥಿಕ ದಕ್ಷತೆಯಿಂದ ತಾವು ಬೆಳೆದ ಉತ್ಪನ್ನಗಳನ್ನು ಆರ್ಥಿಕ ದಕ್ಷತೆಯಿಂದ ಯಾವದೇ ಮಾರುಕಟ್ಟೆಗೆ ಯಾರಿಗಾದರೂ ಮಾರಬಹುದಾಗಿದೆ. ಎಪಿಎಂಸಿ ಗಳು ರಾಜ್ಯ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಎಪಿಎಂಸಿ ಗಳ ಆಡಳಿತವು ಆಯಾ ರಾಜ್ಯಗಳದ್ದೇ ಆಗಿ, ಆಯಾ ರಾಜ್ಯಗಳ ನಿಯಮಗಳಿಗೆ ಒಳಗಾಗಿರುತ್ತವೆ. ಈ ಹೊಸ ಕೇಂದ್ರ ಸರ್ಕಾರದ ಕಾಯಿದೆಯಿಂದ ರೈತರಿಗೆ ಅನುಕೂಲವೇನೆಂದರೆ, ಅವರು ಅವರ ಪದಾರ್ಥ ಗಳನ್ನು ಎಪಿಎಂಸಿ ಅಲ್ಲದೆ, ಎಲ್ಲಿ ಬೇಕಾದರೂ ಹೆಚ್ಚಿನ ಬೆಲೆ, ಒಳ್ಳೆಯ ಆಡಳಿತ, ಒಳ್ಳೆಯ ತೂಕ ಸಿಕ್ಕುವ ಕಡೆ ಹಾಗೂ, ಕಾನೂನು ಬಾಹಿರವಾಗಿ ಬೆಳೆದ ಪದಾರ್ಥಗಳ ಕಡಿತ (unnecessary deductions) ವಿಲ್ಲದ ಕಡೆ ತಮ್ಮ ಪದಾರ್ಥಗಳನ್ನು ಮಾರಿ ಹೆಚ್ಚಿನ ಆದಾಯವನ್ನು ಪಡೆಯಬಹುದಾಗಿದೆ.

**ಹೊಸ ಎಪಿಎಂಸಿ ಕಾಯಿದೆ ಯಿಂದ ಕೇಂದ್ರವು ರಾಜ್ಯ ಸರ್ಕಾರಗಳ ಸ್ವಾಯುತ್ತತೆಗೆ ಧಕ್ಕೆ ತಂದಂತಾಗುತ್ತದೆಯೇ ?**

ಎಪಿಎಂಸಿ ಕಾಯಿದೆಯ ಮೂಲ ಸ್ವರೂಪವನ್ನು ಬದಲಾಯಿಸಿ ಕೇಂದ್ರ ಸರ್ಕಾರವು ರಾಜ್ಯದ ಸ್ವಾಯುತ್ತತೆಗೆ ಧಕ್ಕೆ ತಂದಂತಾಗುತ್ತದೆಯೇ ಎಂಬ ಪ್ರಶ್ನೆ ರಾಜ್ಯಕೀಯ ವಿಜ್ಞಾನ ಶಾಸ್ತ್ರದಲ್ಲಿ ಕೇಳಿ ಬರುವ ಸಾಮಾನ್ಯ ಪ್ರಶ್ನೆ. ಏಕೆಂದರೆ ಎಪಿಎಂಸಿ ಹಾಗೂ ಕೃಷಿ ಮಾರುಕಟ್ಟೆ ರಾಜ್ಯದ ವಿಷಯವಾಗಿದೆ, ಹೀಗಾಗಿ ಕೇಂದ್ರ ಸರ್ಕಾರ ಹಸ್ತಕ್ಷೇಪ ಮಾಡುತ್ತಿದೆ ಎಂಬ ವಾದವಿದೆ. ಕೃಷಿ ರಾಜ್ಯದ ವಿಷಯವಾಗಿದ್ದರೂ ಕೃಷಿಯ ಎಲ್ಲಾ ಅಂಶಗಳೂ ರಾಜ್ಯ ಪಟ್ಟಿಯಲ್ಲಿಲ್ಲ ಎಂಬುದನ್ನು

ಗಮನಿಸಬೇಕು. ಉದಾಹರಣೆಗೆ ಎಪಿಎಂಸಿಗಳಲ್ಲಿರುವ ಭೌತಿಕ ಮಾರುಕಟ್ಟೆಯ ರಚನೆಯು entry 28 ರ ಅಡಿಯಲ್ಲಿದ್ದು ಅದು ರಾಜ್ಯದ ಪಟ್ಟಿಯಲ್ಲಿದೆ[4]. ಆದರೆ entry 26 ರ ಪ್ರಕಾರ, ರಾಜ್ಯಗಳ ಕೃಷಿ ಸರಕುಗಳ ವ್ಯಾಪಾರವು (ಅಂದರೆ trade), ಕೇಂದ್ರದ ವ್ಯಾಪ್ತಿಗೆ ಅಂದರೆ entry 33 ರರಲ್ಲಿ ಒಳಪಟ್ಟಿರುತ್ತದೆ, ಆದ್ದರಿಂದ ಆಹಾರ ಪದಾರ್ಥಗಳ, ಧಾನ್ಯಗಳ ಮತ್ತು ಮುಂತಾದವುಗಳ ವ್ಯಾಪಾರ ವಹಿವಾಟುಗಳ ಕಾನೂನು ಕೇಂದ್ರದ ವ್ಯಾಪ್ತಿಗೆ ಬರುವುದರಿಂದ, ಎಪಿಎಂಸಿ ಕಾನೂನಿನ ಬದಲಾವಣೆ ಕೇಂದ್ರದ ಅಧಿಕಾರಕ್ಕೆ ಬರುತ್ತದೆ. ಹೀಗಾಗಿ, ಕೃಷಿ ಮಾರುಕಟ್ಟೆ (Agricultural marketing) ರಾಜ್ಯ ಪಟ್ಟಿಯಲ್ಲಿದ್ದರೆ, (trade) ವ್ಯಾಪಾರವು ಕೇಂದ್ರದ ಪಟ್ಟಿಯ ಅಡಿಯಲ್ಲಿ ಬರುತ್ತದೆ. ಉದಾಹರಣೆಗೆ ಕರ್ನಾಟಕದ ರೈತರು ತಮ್ಮ ಉತ್ಪನ್ನವನ್ನು ಪಂಜಾಬಿನ ರೈತರಿಗಾಗಲೀ ಸಂಸ್ಕರಣಾ ಘಟಕಗಳಿಗಾಗಲೀ (ಟ್ರೇಡ್) ಮಾರಾಟಮಾಡುವ ಸ್ವಾತಂತ್ರ ಕೇಂದ್ರದ ವ್ಯಾಪ್ತಿಗೆ ಬರುತ್ತದೆ, ಅದು ರಾಜ್ಯ ಎಪಿಎಂಸಿ ಕಾನೂನಿನ ವ್ಯಾಪ್ತಿಗೆ ಬರುವುದಿಲ್ಲ. ಈಗಾಗಲೇ ನಮ್ಮ ರೈತರು ಕೃಷಿಯ ತಾಂತ್ರಿಕತೆಯಿಂದ ಸಾಕಷ್ಟು ಲಾಭಹೊಂದಿ, ಮುಂದೆ ಏನಾದರೂ ಹೆಚ್ಚಿನ ಲಾಭವಾಗಬೇಕಾದರೇ ಅದು ಮಾರುಕಟ್ಟೆಯ ಸುಧಾರಣೆಗಳಿಂದಲೇ ಸಾಧ್ಯವೆಂದು ಸರ್ವವೇದ್ಯವಾಗಿದೆ. ಆದ್ದರಿಂದ ಮಾರುಕಟ್ಟೆ ಸುಧಾರಣೆಗಳೊಂದಿಗೆ ಕೃಷಿ ಆದಾಯವನ್ನು ದ್ವಿಗುಣಗೊಳಿಸ ಬೇಕಾಗಿದೆ.

**ಹೊಸ ಕಾಯಿದೆ ಕಾರ್ಪೊರೇಟ್‌ಗಳನ್ನು ಬಹು ರಾಷ್ಟ್ರೀಯ ಕಂಪನಿಗಳನ್ನು ಬೆಂಬಲಿಸುತ್ತದೆಯೇ?**

ಎಪಿಎಂಸಿಯ ಹೊಸ ಕಾಯಿದೆ, ಕಾರ್ಪೊರೇಟ್‌ಗಳು, ಬಹು ರಾಷ್ಟ್ರೀಯ ಕಂಪನಿಗಳನ್ನು (ಅಂದರೆ ಎಂಎನ್‌ಸಿಗಳನ್ನು) ಕೃಷಿ ಮಾರುಕಟ್ಟೆಯಲ್ಲಿ ಬೆಂಬಲಿಸುತ್ತದೆ ಎಂಬ ಆತಂಕ ರೈತರಲ್ಲಿ ಇದೆ. ಇದಕ್ಕೆ ಉತ್ತರವಾಗಿ ಈ ದೇಶದ ಅನುಭವವೇ ಸಾಕ್ಷಿಯಾಗಿದೆ. ಉದಾಹರಣೆಗೆ, ಬೆಳೆ ಉತ್ಪಾದನೆ, ಬೆಳೆ ಮಾರುಕಟ್ಟೆ ಚಟುವಟಿಕೆಗಳಲ್ಲಿ 1991 ರಲ್ಲಿ ಆರ್ಥಿಕ ಉದಾರೀಕರಣದ ನಂತರ ಎಷ್ಟು ಕಾರ್ಪೊರೇಟ್ / ಎಂಎನ್‌ಸಿಗಳು ಕೃಷಿ ಕ್ಷೇತ್ರಕ್ಕೆ ಪ್ರವೇಶಿಸಿವೆ ಎಂಬುದನ್ನು ಪ್ರಶ್ನೆಮಾಡಿದರೆ, ನಮಗೆ ಉತ್ತರ ಸಿಕ್ಕುತ್ತದೆ. ಇದುವರೆವಿಗೂ ಯಾವ ಎಂಎನ್ಸಿಗಳೂ ಕೃಷಿ ಕ್ಷೇತ್ರದಲ್ಲಿ ಆಹಾರ ಉತ್ಪಾದನೆಯಾಗಲೀ ಆಹಾರ ಸಂಗ್ರಹಣೆ ಮಾಡುವಾದಾಗಲೀ, ಆಹಾರ ಸಾಗಾಣಿಕೆ ಮಾಡುವಾದಾಗಲೀ, ಆಹಾರ ಹಂಚಿಕೆ ಮಾಡುವಾದಾಗಲೀ ಎಲ್ಲೂ ಕಾಲಿಟ್ಟಿಲ್ಲ. ಎಂಎನ್ಸಿ ಗುಮ್ಮ ನೆಂದು ತೋರಿಸಿ ತೋರಿಸಿ ರೈತರಿಗೆ ಸರಿಯಾದ ತಿಳುವಳಿಕೆ ಕೊಡದೆಯೇ ಅಜ್ಞಾನ ಹೆಚ್ಚು ಮಾಡಿ ರೈತರ ಅಭಿವೃದ್ಧಿಯನ್ನು ಕುಂಠಿಸುವ ಪ್ರಯತ್ನ ಗಳು ನಡೆಯುತ್ತಲೇ ಇವೆ. ಉದಾಹರಣಗೆ ನಮ್ಮ ವ್ಯಾಪಾರಿಗಳೇ, ನಮ್ಮ ಭೂ ಮಾಲೀಕರೇ ನಮ್ಮ ರೈತರನ್ನು ಶೋಷಣೆ ಮಾಡಿರುವಷ್ಟು ಬೇರೆ ಯಾರೂ ಮಾಡಿರುವುದಿಲ್ಲ. ಕಾಗೋಡು ಸತ್ಯಾಗ್ರಹವೇ ಇದಕ್ಕೆ ಸಾಕ್ಷಿಯಾಗಿ ನಿಂತಿದ್ದು, ಭೂಮಾಲೀಕರಿಂದಾಗಿ ರೈತರ ಶೋಷಣೆಯ ಸತ್ಯಾಗ್ರಹಕ್ಕೆ ಅಂದು ಸ್ಪಂದಿಸಿದ ಶ್ರೀ ಶಾಂತವೇರಿ ಗೋಪಾಲಗೌಡರಾಗಲೀ, ಶ್ರೀ ರಾಮ ಮನೋಹರ ಲೋಹಿಯಾರಾಗಲೀ ಸಾಕ್ಷಿಯಾಗಿದ್ದಾರೆ. ಕೆಂಟಕಿ ಫ್ರೈಡ್ ಚಿಕೆನ್ ಎಂಬ ಸಂಸ್ಥೆ ಬಂದಾಗ ಸಾಕಷ್ಟು ಪ್ರತಿಭಟನೆಗಳು ನಡೆದವು. ಆದರೆ ಅದಕ್ಕೆ ನಮ್ಮ ರೈತರ ಕೋಳಿಗಳೇ ಮಾರಾಟದ ವಸ್ತುವಾದವು, ನಮ್ಮ ರೈತರೇ ಲಾಭ ಪಟ್ಟುಕೊಂಡರು. ಇದನ್ನು ಎಲ್ಲರೂ ಬಲ್ಲರು. ನಂತರ ಬಿಟಿ ಹತ್ತಿ ಬಂದಾಗಲೂ ಸಾಕಷ್ಟು ಪ್ರತಿಭಟನೆಗಳು ನಡೆದವು. ಈಗ ರಾಷ್ಟ್ರದ ಹತ್ತಿಯ ಶೇಕಡಾ ೯೫ರಷ್ಟು ಭಾಗ ಬಿಟಿ ಹತ್ತಿಯೇ ಬೆಳೆಯಲಾಗುತ್ತಿದ್ದು, ವಿಶ್ವದಲ್ಲೇ ಭಾರತ ಅತಿ ಹೆಚ್ಚು ಹತ್ತಿ ಬೆಳೆಯುವ ಹಾಗೂ ಎರಡನೆಯ ಅತಿ ಹೆಚ್ಚು ಹತ್ತಿ ರಫ್ತು ಮಾಡುವ ದೇಶವಾಗಿದೆ. ಇದರ ಲಾಭಾಂಶ ನಮ್ಮ ರೈತರಿಗೆ ಸಿಕ್ಕುತ್ತಿಲ್ಲವೇ, ಪ್ರಾಜ್ಞರು ಅರಿಯಬೇಕಾಗಿದೆ. ಅಂದ ಮಾತ್ರಕ್ಕೆ ಎಲ್ಲ ಎಂಎನ್ಸಿಗಳನ್ನೂ ನಾವು ಬೆಂಬಲಿಸಬೇಕಾಗಿಲ್ಲ ಅಥವಾ ಹಳಿಯಲೂ ಬೇಕಾಗಿಲ್ಲ. ರೈತರಿಗೆ ಹಾಗೂ

[4] Ramesh Chand, NDTV interview https://www.youtube.com/watch?v=8mez8xgqyE8

ಸಮಾಜಕ್ಕೆ ಆರ್ಥಿಕವಾಗಿಯೂ ಸಹಾಯವಾಗುವ ದೃಷ್ಟಿಯಿಂದ ಸರಿಯಾದ ವಿಷಯಗಳನ್ನು ರೈತರಿಗೆ ತಿಳಿಸಬೇಕಾಗಿದೆ. ತಂತ್ರಜ್ಞಾನ ಎಲ್ಲಿಂದಲಾದರೂ ಬರಲೀ, ಆದರೆ ಅದರ ಪ್ರಯೋಜನಗಳನ್ನು ರೈತರು ಸ್ವಾಗತಿಸಿದ್ದಾರೆ, ಉದಾಹರಣೆಗೆ ಅವರು ಫೇಸ್‌ಬುಕ್, ಜಿಯೋ, ಗೂಗಲ್ ಅನ್ನು ಬಳಸುತ್ತಾರೆ, ಇದರರ್ಥ ಸ್ಥಳೀಯ ತಂತ್ರಜ್ಞತೆಗೆ / ಆರ್ಥಿಕತೆಗೆ ಅವರ ಅಗೌರವ ಎಂದರ್ಥವಲ್ಲ. TRAI ಅಸ್ತಿತ್ವದೊಂದಿಗಿನ ಸ್ಪರ್ಧೆಯಿಂದಾಗಿ ರೈತರು ಭಾರತದಲ್ಲಿ ಅತಿ ಕಡಿಮೆ ಮೊಬೈಲ್ ಕರೆ ಶುಲ್ಕವನ್ನು ಅನುಭವಿಸಿದ್ದಾರೆ. ಇವೆಲ್ಲ ಕಾರ್ಪೊರೇಟ್ ಗಳು, ಎಂಎನ್ಸಿ ಗಳ ಸಹಾಯದಿಂದ ಆಗಿಲ್ಲವೇ, ಗಮನಿಸಬೇಕು.

## ಹೊಸ ಕೃಷಿ ಕಾನೂನುಗಳು ರೈತರಿಗೆ ಉತ್ತಮ ಬೆಲೆಗಳನ್ನು ಪಡೆಯಲು ಯಾವ ರೀತಿ ಸಹಾಯ ಮಾಡುತ್ತವೆ ?

ಈ ಹೊಸ ಕಾನೂನುಗಳ ಮೂಲಕ ರೈತರು ಉತ್ತಮ ಬೆಲೆಗಳನ್ನು ಮೂರು ರೀತಿಯಲ್ಲಿ ಪಡೆದುಕೊಳ್ಳಲು ಸಾಧ್ಯವಾಗುವದು :

1. ಸ್ಪರ್ಧೆಯ ಮೂಲಕ ಅತಿಯಾದ ಮಧ್ಯವರ್ತಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದರ ಮೂಲಕ, ಮಾರುಕಟ್ಟೆ ಖರ್ಚುಗಳು ಕಡಿಮೆಯಾಗಿ, ರೈತರು ಗ್ರಾಹಕರು ಕೊಡುವ ಬೆಲೆಯ ಹೆಚ್ಚಿನ ಪಾಲನ್ನು ಪಡೆಯಬಹುದು,
2. ಹೊಸ ಖರೀದಿದಾರರಿಗೆ ಮಾರುಕಟ್ಟೆಯಲ್ಲಿ ಭಾಗವಹಿಸಲು ಅವಕಾಶ ನೀಡುವ ಮೂಲಕ, ಹೊಸ ಖರೀದಿದಾರರು ಹೊಸ ಸಂಭಾವ್ಯ ಮೌಲ್ಯ ಸರಪಳಿ ಬಳಕೆಯಿಂದಾಗಿ ಉತ್ತಮ ಬೆಲೆಗಳನ್ನು ಕೊಡುವ ಸಾಧ್ಯತೆ ಹಾಗೂ ಅದನ್ನು ಪಡೆಯುವ ಸಾಮರ್ಥ್ಯ ರೈತರಿಗೆ ಇದೆ,
3. ಹೊಸ ಖರೀದಿದಾರರು ಕಾನೂನಿನ ಪ್ರಕಾರ ಯಾವದೇ ಶುಲ್ಕಗಳನ್ನು ವಿಧಿಸದೆಯೇ, ತಮ್ಮ ಉತ್ಪನ್ನಗಳಲ್ಲಿ ಅಕ್ರಮ ಕಡಿತಗಳನ್ನು ಮಾಡದಿರುವ ಮೂಲಕ ಮತ್ತು ಸ್ಪರ್ಧಾತ್ಮಕ ಆಧಾರದ ಮೇಲೆ ವಿವಿಧ ರೀತಿಯ ಸೌಲಭ್ಯಗಳನ್ನು / ಬೆಂಬಲ ಬೆಲೆಯನ್ನು ನೀಡುವ ಮೂಲಕ ತಮಗೆ ಮಾರಾಟ ಮಾಡಲು ರೈತರನ್ನು ಆಕರ್ಷಿಸಬಹುದು.

ಖರೀದಿದಾರರಿಗೆ ಎಪಿಎಂಸಿ ಯಾರ್ಡ್‌ಗಳ ಹೊರಗೆ ಖರೀದಿಸಲು ಅನುಮತಿ ಇದೆಯಾದ್ದರಿಂದ, ಎಪಿಎಂಸಿ ಮಂಡಿ ವ್ಯಾಪಾರಿಗಳು ಸಹ ಸ್ಪರ್ಧಿಸಿ ತಮ್ಮ ಬೆಲೆಯನ್ನು ಹೆಚ್ಚಿಸಬೇಕಾಗುತ್ತದೆ, ರೈತರಿಂದ ಕಮಿಷನ್ ಪಡೆಯದೇ ಹಾಗೂ ಅವರ ಎಲ್ಲಾ ಅಕ್ರಮ (deductions) ಕಡಿತಗಳನ್ನು ನಿಲ್ಲಿಸಬೇಕಾಗುತ್ತದೆ. ಇವೆಲ್ಲವುಗಳಿಂದಾಗಿ ಹಾಗೂ ಮುಖ್ಯವಾಗಿ (healthy competition) ಆರೋಗ್ಯಕರ ಸ್ಪರ್ಧಾತ್ಮಕ ರೀತ್ಯ ರೈತರಿಗೆ ಉತ್ತಮ ಬೆಲೆಯನ್ನು ಉತ್ತಮ ತೂಕ ಮಾಡುವ ವಿಧಾನವನ್ನು, ಉತ್ತಮ ಸಾಗಾಣಿಕಾ ವ್ಯವಸ್ಥೆಯನ್ನು ಮಾಡಿ, ಯಾವದೇ ರೀತಿಯಲ್ಲಿ (deductions) ವಸ್ತುವಿನ ಕಡಿತ ಮಾಡದೆ ಉತ್ತಮ ರೀತಿಯ ಮಾರುಕಟ್ಟೆ ಸೇವೆಯನ್ನು ಒದಗಿಸಿ, ಎಪಿಎಂಸಿ ವ್ಯಾಪಾರಿಗಳಿಗೆ ಸ್ಪರ್ಧೆ ನೀಡಿ ಉತ್ತಮ ಆದಾಯವನ್ನು ರೈತರು ಪಡೆಯುವಲ್ಲಿ ಸಹಾಯಮಾಡಬಹುದು

## ಸರ್ಕಾರದ ನಿಯಂತ್ರಣ ಎಲ್ಲಿ ಹೆಚ್ಚು ಅಗತ್ಯ? : ಸಿರಿಧಾನ್ಯಗಳ ಉತ್ಪಾದನೆ ಮತ್ತು ಮಾರಾಟದಲ್ಲಿ

ಹಸಿರು ಕ್ರಾಂತಿಯ ಬೆಳೆಗಳಾದ ಭತ್ತ ಹಾಗೂ ಗೋಧಿ ಗಳ ಕೃಷಿ ಹಾಗೂ ಬಳಕೆಯಿಂದಾಗಿ, ರಾಗಿ, ಜೋಳ, ಸಜ್ಜೆ, ಸಿರಿ ಧಾನ್ಯಗಳ ಕೃಷಿ ಹಾಗೂ ಬಳಕೆಯ ಮೇಲೆ ಋಣಾತ್ಮಕ ಪರಿಣಾಮ ಬೀರಿತು. ಇವುಗಳು ಅತಿ ಕಡಿಮೆ ಮಳೆಬೀಳುವ ಹಾಗೂ ಅತಿಹೆಚ್ಚು ಬಿಸಿಲಿರುವ ಪ್ರದೇಶಗಳಲ್ಲಿ ಹಾಗೂ ಬಹಳ ಮುಂದೂಡಲ್ಪಟ್ಟ ಮಳೆ ಸನ್ನಿವೇಶದಲ್ಲಿಯೂ ಒಳ್ಳೆಯ ಆದಾಯ ಕೊಡುವಂತಹ ಬೆಳೆಗಳಾಗಿದ್ದರೂ ಹಾಗೂ ೭೦ - ೯೦ ದಿನಗಳೊಳಗೇ ಖಟಾವು ಮಾಡುವಂತಹ,

ಜಾನುವಾರುಗಳಿಗೆ ಒಳ್ಳೆಯ ಮೇವು ನೀಡುವಂತಹ, ಮನುಷ್ಯರಿಗೆ ಆಹಾರದ ನಾರಿನಂಶ, ಪ್ರೋಟೀನ್ ಸಮೃದ್ಧ ಇದ್ದರೂ ರೈತರು ಬೆಳೆಯುವದನ್ನೇ ಬಿಟ್ಟರು. ಏಕೆಂದರೆ ಭತ್ತ, ಗೋಧಿಗಳಿಗೆ ಬೆಂಬಲ ಬೆಲೆ ಕೊಟ್ಟು ಅದನ್ನು ಕೊಂಡುಕೊಳ್ಳುವ ವ್ಯವಧಾನವನ್ನೂ ಹಾಗೂ ಅವುಗಳ ಬೆಲೆ ತೀರಾ ಕಡಿಮೆ ಇಳಿಸಿ ಎಷ್ಟೋ ಸರ್ಕಾರಗಳು ಬಿಟ್ಟಿಯಾಗಿ ನೀಡುತ್ತಿರುವುದರಿಂದ, ಸಿರಿಧಾನ್ಯಗಳನ್ನು ಜನಗಳು ತಿನ್ನುವುದನ್ನು ಬಿಟ್ಟರು. ತಿನ್ನುವುದನ್ನು ಬಿಟ್ಟರಾದ್ದರಿಂದ ರೈತರು ಬೆಳೆಯುವುದನ್ನೂ ಬಿಟ್ಟರು. ಈಗ ಇತ್ತೀಚೆಗೆ ಸಿರಿಧಾನ್ಯಗಳ ಉತ್ತಮ ಗುಣಗಳ ಕ್ರಮೇಣ ಅರಿವಿನೊಂದಿಗೆ, ನಗರ ಪ್ರದೇಶಗಳಲ್ಲಿ ಸಕ್ಕರೆ ಖಾಯಿಲೆ ಅಥವಾ ದೇಹದ ತೂಕದ ಸಮಸ್ಯೆ ಯುಳ್ಳವರಿಂದ ಲಾದರೂ ಬೇಡಿಕೆ ಕ್ರಮೇಣ ಹೆಚ್ಚುತ್ತಿದೆ. ಸಣ್ಣ ರಾಗಿಗಳು ಅಲ್ಪಾವಧಿಯ ಬೆಳೆಗಳಾಗಿದ್ದು, ಇದು ಕನಿಷ್ಠ 20 ದಿನಗಳ ಕೃಷಿಯನ್ನು ಉಳಿಸಬಲ್ಲದು ಮತ್ತು ಹೆಚ್ಚಿನ ತಾಪಮಾನವನ್ನು ಸಹಿಸಿಕೊಳ್ಳುವುದರ ಜೊತೆಗೆ ತಡವಾದ ಮಳೆ ಮತ್ತು ಬರವನ್ನು ತಡೆದುಕೊಳ್ಳಬಲ್ಲದು. ಈಗ ಸಿರಿಧಾನ್ಯಗಳ ಬೆಲೆ ಅಕ್ಕಿಗಿಂತ ಎರಡು ಪಟ್ಟು ಹೆಚ್ಚಾಗಿದೆ ಮತ್ತು ಬಾಸ್ಮತಿ ಅಕ್ಕಿಯ ಬೆಲೆಗೆ ಸಮನಾಗಿದೆ. ಆದರೆ ಗ್ರಾಹಕರು ಕೊಡುವ ಈ ದುಪ್ಪಟ್ಟು ಬೆಲೆ, ಎಷ್ಟರ ಮಟ್ಟಿಗೆ ಸಿರಿಧಾನ್ಯ ಬೆಳೆಯುವ ರೈತರಿಗೆ ತಲುಪುತ್ತಿದೆ, ದೇವರೇ ಬಲ್ಲ. ಆದ್ದರಿಂದ ಇಲ್ಲಿ ಸರ್ಕಾರದ ನಿಯಂತ್ರಣ ಬೇಕಾಗಿದೆ. ನಗರ ಪ್ರದೇಶಗಳಲ್ಲಿ ಅದರ ಬಳಕೆಯನ್ನು ಉತ್ತೇಜಿಸಲು ಖರೀದಿ ಸೇರಿದಂತೆ ಸಂಸ್ಕರಣೆ ಮತ್ತು ಮಾರುಕಟ್ಟೆ ಸೌಲಭ್ಯಗಳನ್ನು ರಚಿಸುವುದು ಮುಖ್ಯವಾಗಿದೆ. ಹಾಗೂ ಸಿರಿಧಾನ್ಯಗಳನ್ನು procure ಮಾಡುವುದೂ ಅಷ್ಟೇ ಮುಖ್ಯವಾಗಿರುತ್ತದೆ.

<u>ಬೆಂಬಲ ಬೆಲೆಯನ್ನು ಘೋಷಿಸಿದ ಮಾತ್ರಕ್ಕೇ, ರೈತರಿಗೆ ಒಳ್ಳೆಯ ಬೆಲೆ ಸಿಕ್ಕುತ್ತದೆಯೇ ? ಕರ್ನಾಟಕದಲ್ಲಿ ರಾಗಿ ರೈತರ ಅನುಭವ</u>

**ರೈತರು ಮತ್ತು ರೈತ ಮುಖಂಡರು ಸಾಮಾನ್ಯವಾಗಿ ಡಾ . ಎಂ.ಎಸ್. ಸ್ವಾಮಿನಾಥನ್ ವರದಿಯನ್ನು ಉಲ್ಲೇಖಿಸಿ, ಬೆಲೆಯ ಬೆಂಬಲ ಬೆಲೆಯು ಕಾಸ್ಟ್ C2 ವಿನ ಮೇಲೆ ಶೇಕಡಾ 50 ರಷ್ಟು ಹೆಚ್ಚಿರಬೇಕು ಎಂದು ತಪ್ಪಾಗಿ ಉಲ್ಲೇಖಿಸಿ ಬೇಡಿಕೆ ಇಡುತ್ತಾರೆ. ಏಕೆಂದರೆ ಡಾ ಸ್ವಾಮಿನಾಥನ್ ವರದಿಯಲ್ಲಿ ಉತ್ಪಾದನಾ (weighted) ಸರಾಸರಿ ಖರ್ಚಿಗಿಂತ ಶೇಕಡಾ 50 ರಷ್ಟು ಹೆಚ್ಚಿರಬೇಕೆಂಬ ಹೇಳಿದೆ ಹೊರತೂ ಉತ್ಪಾದನಾ ವೆಚ್ಚ ಎ 1, ಎ 2, ಬಿ, ಸಿ 1, ಸಿ 2, ಸಿ 3 ಎಂದು ನಿಗದಿ ಪಡಿಸಿಲ್ಲ. ತಪ್ಪಾಗಿ ಉಲ್ಲೇಖಿಸಲಾಗುತ್ತದೆ. ಕಾಸ್ಟ್ ಸಿ ಯ ಒಂದು ಪ್ರಮುಖ ಅಂಶವೆಂದರೆ ಭೂಮಿಯ ಬಾಡಿಗೆ ಬೆಳೆ, ಮಣ್ಣಿನ ಫಲವತ್ತತೆ, ನೀರಾವರಿ ಲಭ್ಯತೆ, ಋತುಮಾನ, ಇತರೆ ಮಾರುಕಟ್ಟೆ ಅಂಶಗಳು ಮುಂತಾದವುಗಳೊಂದಿಗೆ ವ್ಯಾಪಕವಾಗಿ ಬದಲಾಗುತ್ತದೆ. ಆದ್ದರಿಂದ ಒಂದು ಬೆಳೆಗೆ ಇಡೀ ದೇಶಕ್ಕೆ ಒಂದು ಬಾಡಿಗೆ ಮೌಲ್ಯವನ್ನು ಅಂದಾಜು ಮಾಡುವುದು ಅತ್ಯಂತ ಸವಾಲಿನ ಸಂಗತಿಯಾಗಿದೆ. ಅದಕ್ಕಾಗಿ ಭೂಮಿ ಬಾಡಿಗೆಯನ್ನು ಬೆಳೆಯ ಉತ್ಪಾದನಾ ಮೌಲ್ಯದ ಶೇಕಡಾ ೨೫ ರಷ್ಟು ಎಂದು ಕೆಲವು ರಾಜ್ಯಗಳು ಪರಿಗಣಿಸುತ್ತಿವೆ. ಆದರೆ ಮುಖ್ಯವಾದ ಅಂಶವೇನೆಂದರೆ, ಬೆಂಬಲ ಬೆಲೆಯ ಘೋಷಣೆಯ ನಂತರವೂ ರೈತರು ಬೆಂಬಲ ಬೆಳೆಯ ಶೇಕಡಾ 50ರಷ್ಟು ಪಡೆಯಲೂ ಕಷ್ಟಪಡುತ್ತಿದ್ದಾರೆ ಮತ್ತು ಇಂದಿಗೂ ಮಂಡಿ ವ್ಯಾಪಾರಿಗಳು ಉತ್ಪನ್ನಗಳಲ್ಲಿ ಅಕ್ರಮ ಕಡಿತಗಳನ್ನು ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ರಾಗಿಯನ್ನು ಬೆಳೆಸುವ ರೈತರಾಗಿ ಕೃಷಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಎ ಸೀತಾರಾಮ್ ಅವರ ಇತ್ತೀಚಿನ (6/10/2020 ರ) ಅನುಭವವು ರೈತರಿಗೆ ಒಳ್ಳೆಯ ಬೆಲೆ ನೀಡುವಲ್ಲಿ ಯಲ್ಲಿ ಎಂಎಸ್ಪಿ ಒಂದೇ, ಎಷ್ಟು ಸಮರ್ಪಕ ಎಂದು ತಿಳಿಯುತ್ತದೆ. ಹಾಗೂ ಗ್ರಾಹಕರ ಬೇಡಿಕೆ ಅತ್ಯಂತ ನಿರ್ಣಾಯಕ, ಮತ್ತು ಅಕ್ಕಿಯನ್ನು ವಾಸ್ತವಿಕವಾಗಿ ಉಚಿತವಾಗಿ ನೀಡಲಾಗುತ್ತಿರುವುದರಿಂದ, ಗ್ರಾಹಕರು ರಾಗಿ ಅಥವಾ ಇತರ ಸಿರಿಧಾನ್ಯಗಳಿಗೆ ಏಕೆ**

ಆದ್ಯತೆ ನೀಡುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಪ್ರಾಧ್ಯಾಪಕ ಎ ಸೀತಾರಾಮ್ ರವರು ಲೇಖಕನ ಬಳಿ ಹಂಚಿಕೊಂಡ ಅನುಭವ ಈ ರೀತಿ ಇದೆ.

> "ರಾಗಿಯನ್ನು ಹತ್ತಿರದ ಕನಕಪುರದ ಎಪಿಎಂಸಿ ಮಂಡಿಯಲ್ಲಿ ಮಾರಾಟ ಮಾಡಲು, ರಾಗಿಯನ್ನು 50 ಕಿ.ಗ್ರಾಂ ಚೀಲಗಳಲ್ಲಿ ಮಾತ್ರ ಪ್ಯಾಕ್ ಮಾಡಬೇಕಾಗಿತ್ತು ಮತ್ತು ಕೃಷಿಯ ಪುರಾವೆಯಾಗಿ ಪಹಾನಿ, ಖಾಥಾ ದೊಂದಿಗೆ ಎಪಿಎಂಸಿಗೆ ಸಾಗಿಸಬೇಕಾಗಿತ್ತು. ಗುಣಮಟ್ಟವನ್ನು ಮಂಡಿಯಲ್ಲಿ ಎ , ಬಿ ಅಥವಾ ಸಿ ಗ್ರೇಡ್ ಎಂದು ನಿರ್ಧರಿಸಲಾಗುತ್ತದೆ ಮತ್ತು ಅದಕ್ಕೆ ಅನುಗುಣವಾಗಿ ರಾಗಿಗೆ, ಸರ್ಕಾರವು ಎಂಎಸ್ಪಿ ಘೋಷಿಸಿದರೂ ಸಹ, MSP ರೈತರಿಗೆ ಸಿಕ್ಕುತ್ತದೆ ಎಂಬುವದು ಅಸತ್ಯ. ಕಳೆದ ವರ್ಷ ಸರ್ಕಾರವು 100 ಕೋಟಿ ಮೌಲ್ಯದ ರಾಗಿಯನ್ನು ಖರೀದಿಸಿತು.ಆದರೆ ಈ ವರ್ಷ ಯಾವುದೇ ಸಂಗ್ರಹಣೆ ಇರಲಿಲ್ಲ. ಇಂದು ನಾನು 660 ಕೆಜಿ ರಾಗಿಗೆ ರೂ 10650 / ಪಡೆದಿದ್ದೇನೆ ಅಂದರೆಒಂದು ಕ್ವಿಂಟಲ್‌ಗೆ ರೂ 1613 ಪಡೆದು, ಇದು ಎಂಎಸ್‌ಪಿಗಿಂತ ಶೇಕಡಾ 50 ರಷ್ಟು ಕಡಿಮೆ ಇದೆ ಎಂದು ಗೊತ್ತಾಯಿತು. ಹಾಗೂ ಎಪಿಎಂಸಿ ವ್ಯಾಪಾರಿ ಅನಧಿಕೃತವಾಗಿ ಒಂದು ಚೀಲಕ್ಕೆ 1 ಕೆಜಿ ಕಡಿತಗೊಳಿಸಿದ್ದಾರೆ. ವಾಸ್ತವದ ಸಂಗತಿಯೆಂದರೆ, ರಾಗಿಗಾಗಿ ಯಾವುದೇ ಬೇಡಿಕೆ ಇಲ್ಲ ಗ್ರಾಹಕರು ಕಡಿಮೆಯಾಗಿದ್ದಾರೆ. ಕರ್ನಾಟಕದ ರಾಗಿ ಪ್ರದೇಶವು 2000 ರಿಂದ 50% ರಷ್ಟು ಕುಸಿದಿದೆ. ಪ್ರಸ್ತುತ ರಾಗಿ ಪ್ರದೇಶವು ಕೇವಲ 6-7 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿದೆ ಹಾಗೂ ರಾಗಿಗೆ ಯಾವುದೇ ಕೊರತೆಯಿಲ್ಲದೆ, ಬೇಡಿಕೆ ನಶಿಸಿ ಹೋಗಿದೆ. ಹಾಗೂ ಪಡಿತರ ಅಂಗಡಿಗಳಲ್ಲಿ PDS ಮೂಲಕ BPL ಗ್ರಾಹಕರಿಗೆ ಉಚಿತವಾಗಿ ಅಕ್ಕಿ ಒದಗಿಸುವುದರಿಂದ, ಇತರ ಧಾನ್ಯಗಳಿಗೆ ಮತ್ತು ರಾಗಿಗೆ ಬೇಡಿಕೆ ನಶಿಸಿ ಹೋಗಿದೆ. ಮತ್ತು ಪ್ರಸ್ತುತ, ಯಾಂತ್ರೀಕರಣವಿಲ್ಲದೆ ರಾಗಿ ಉತ್ಪಾದನಾ ವೆಚ್ಚವು ತುಂಬಾ ಹೆಚ್ಚಾಗಿದೆ. ರೈತರು ಈ ಬೆಳೆ ಬೆಳೆಯಲು ಆದ್ಯತೆ ನೀಡದಿರಲು ಇದು ಸಹ ಕಾರಣವಾಗಿದೆ. ಯಾವುದೇ ರೈತ, ಮಾರುಕಟ್ಟೆ ಬೇಡಿಕೆ ಕಡಿಮೆ ಯಾದ್ದರಿಂದ ರಾಗಿ ಬೆಳೆಯಲು ಇಚ್ಛಿಸುವುದಿಲ್ಲ. ಇನ್ನೂ ಅನೇಕ ಸಮಸ್ಯೆಗಳಿವೆ. ಮಾರುಕಟ್ಟೆಯಲ್ಲಿ ಎಲ್ಲಾ ರಾಗಿಗಳನ್ನು ಸಂಗ್ರಹಿಸುವ ಸಾಮರ್ಥ್ಯ ಸರ್ಕಾರಕ್ಕೆ ಇಲ್ಲ. ಕಳೆದ ಎರಡು ವರ್ಷಗಳಲ್ಲಿ ಮಾತ್ರ ಕೆಲವು ಸಂಗ್ರಹಣೆ ಮಾಡಲಾಗಿದೆ. ಕರ್ನಾಟಕವು ವಾರ್ಷಿಕವಾಗಿ 1.2 ರಿಂದ 1.4 ಮಿಲಿಯನ್ ಟನ್ ರಾಗಿ ಉತ್ಪಾದಿಸುತ್ತದೆ. ಶೇಕಡಾ 25 ರಷ್ಟು ಉತ್ಪನ್ನಗಳನ್ನು ಸಂಗ್ರಹಿಸಲು, ಸರ್ಕಾರಕ್ಕೆ ಲಾಜಿಸ್ಟಿಕ್ಸ್ ಇತರ ವೆಚ್ಚಗಳ ಜೊತೆಗೆ ಸುಮಾರು ರೂ 1000 ಕೋಟಿ ಬೇಕಾಗುತ್ತದೆ. ಆದ್ದರಿಂದ ಎಂಎಸ್ಪಿ ಕೇವಲ ಘೋಷಣೆಗಾಗಿ ಪ್ರಕಟಣೆಗಾಗಿ ಅಲ್ಲ, ಎಲ್ಲಾ ಖರೀದಿದಾರರು ಎಂಎಸ್‌ಪಿಯಲ್ಲಿ ರಾಗಿಯನ್ನು ಖರೀದಿಸಿದರೆ, ರಾಗಿಯ ಚಿಲ್ಲರೆ ಮಾರುಕಟ್ಟೆ ಬೆಲೆ ಕೆಜಿಗೆ ₹ 50 ಇರುತ್ತದೆ. ಈಗ ರೂ 25-30 ಕೆಜಿಗೆ ಇದೆ. ಆದ್ದರಿಂದ ಎಂಎಸ್ಪಿಯನ್ನು ಗರಿಷ್ಠ ಬೆಂಬಲ ಬೆಲೆ ಎಂದು ಪರಿಗಣಿಸಲಾಗುವುದು ಹೊರತು ಕನಿಷ್ಠ ಬೆಲೆ ಅಲ್ಲ "

## ಹಸಿರು ಕ್ರಾಂತಿ ಆಗಿಯೂ ರೈತರ ಕೃಷಿ ಆದಾಯ ಏಕೆ ದ್ವಿಗುಣಗೊಂಡಿಲ್ಲ ?

ಹಸಿರು ಕ್ರಾಂತಿಯ ತಂತ್ರಜ್ಞಾನಗಳು ಹೆಚ್ಚಿನ ಬೆಳೆಗಳ ಉತ್ಪಾದಕತೆಯನ್ನು ದ್ವಿಗುಣಗೊಳಿಸಲು ಕಾರಣವಾಗಿವೆ· ಆದಾಗ್ಯೂ, ಉತ್ಪಾದಕತೆಯನ್ನು ದ್ವಿಗುಣಗೊಳಿಸುವುದರಿಂದ ಕೃಷಿ ಆದಾಯ ದ್ವಿಗುಣಗೊಂಡಿಲ್ಲ· ಈ ವಿದ್ಯಮಾನಕ್ಕೆ ಎರಡು ಕಾರಣಗಳಿವೆ· ಒಂದು, ಕೃಷಿ ಬೆಳೆಗಳಿಗೆ inelastic demand ಹಾಗೂ inelastic supply ಇರುವುದರಿಂದ, ಕೃಷಿ ಉತ್ಪಾದನೆ ಹೆಚ್ಚಾದಲ್ಲಿ, ರೈತರ ಆದಾಯ ಹೆಚ್ಚಾಗುವ ಬದಲು ಕಡಿಮೆಯಾಗುತ್ತದೆ· ಇದಕ್ಕೆ paradox of

plenty ಎಂದು ಕರೆಯುತ್ತಾರೆ. ಎರಡನೆಯದಾಗಿ, ರೈತರು ಎದುರಿಸುತ್ತಿರುವ ಮಾರುಕಟ್ಟೆಗಳು ಸ್ಪರ್ಧಾತ್ಮಕವಾಗಿಲ್ಲ, ಮತ್ತು ಹೆಚ್ಚಿನ ಸಂಖ್ಯೆಯ ಮಧ್ಯವರ್ತಿಗಳ ಉಪಸ್ಥಿತಿಯಿಂದಾಗಿ, ಅವರು ಗ್ರಾಹಕರ ಬೆಲೆಯ ಗಣನೀಯ ಭಾಗವನ್ನು ಹೀರಿಕೊಳ್ಳುತ್ತಾರೆ ಮತ್ತು ಅದಕ್ಕೆ ಅನುಗುಣವಾಗಿ ಗಣನೀಯ ಪಾಲನ್ನು ರೈತರಿಗೆ ವರ್ಗಾಯಿಸುವಲ್ಲಿ ವಿಫಲರಾಗುತ್ತಾರೆ. ಇದರಿಂದಾಗಿ ರೈತರು, ಗ್ರಾಹಕರ ಕೊಡುವ ಬೆಲೆಯಲ್ಲಿ ಶೇಕಡಾ 50 ಕ್ಕಿಂತ ಕಡಿಮೆ ಪಡೆಯುತ್ತಾರೆ. ಭಾರತೀಯ ರಿಸರ್ವ್ ಬ್ಯಾಂಕಿನ[5] (೨೦೧೯ರ ) ಅಧ್ಯಯನದಲ್ಲಿ ದೇಶದ 9400 ರೈತರು, ವ್ಯಾಪಾರಿಗಳು ಮತ್ತು ಚಿಲ್ಲರೆ ವ್ಯಾಪಾರಿಗಳ ಸಮೀಕ್ಷೆ ಒಟ್ಟಾರೆ ೧೬ ರಾಜ್ಯಗಳಲ್ಲಿ ನಡೆಸಿ ಗ್ರಾಹಕರ ಬೆಲೆಯಲ್ಲಿ ಉತ್ಪಾದಕರ ಪಾಲು ಆಲೂಗಡ್ಡೆಯಲ್ಲಿ ಅತಿ ಕಡಿಮೆ (28%), ಈರುಳ್ಳಿಯಲ್ಲಿ (33%), ಹಸಿರು ಮೆಣಸಿನಕಾಯಿಗಳು (33%), ಅಕ್ಕಿ (49%), ಅರಿಶಿನ (55%), ತೊಗರಿ (60%), ಟೊಮೆಟೊ (61%), ಹೆಸರುಕಾಳು (63%), ಬಾಳೆಹಣ್ಣು (65%), ಉದ್ದಿನಬೇಳೆ (68%), ಬದನೆಕಾಯಿ (74%), ಸೋಯಾಬೀನ್ (75%), ನೆಲಗಡಲೆ (76%) ಮತ್ತು ಕೆಂಪು ಮೆಣಸಿನಕಾಯಿಗಳು (78%) ಎಂದು ವರದಿ ಸಲ್ಲಿಸಲಾಗಿದೆ. ಬಹುಪಾಲು ರೈತರು MSP ಮತ್ತು ಮಾರುಕಟ್ಟೆ ಮಾಹಿತಿಯು ಉತ್ತಮ ಬೆಲೆಗಳನ್ನು ಅರಿತುಕೊಳ್ಳಲು ಸಹಾಯ ಮಾಡಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಮುಕ್ತ ವ್ಯಾಪಾರಕ್ಕೆ ಅವಕಾಶ ನೀಡುವುದು ಸಹಾಯಕ ಎಂದು ಬಹುಪಾಲು ವ್ಯಾಪಾರಿಗಳು ಅಭಿಪ್ರಾಯಪಟ್ಟಿದ್ದಾರೆ.

## ಎಪಿಎಂಸಿಗಳು ಆಲಿಗೋಪ್ಸೋನಿ ಮಾರುಕಟ್ಟೆಗಳು

ಎಪಿಎಂಸಿಗಳು ಆಲಿಗೋಪ್ಸೋನಿ ಮಾರುಕಟ್ಟೆಗಳು ಆಗಿದ್ದು ಅಲ್ಲಿ ಕೆಲವು ಖರೀದಿದಾರರು ಹೆಚ್ಚಿನ ಸಂಖ್ಯೆಯ ಮಾರಾಟಗಾರರ (ರೈತರ) ಉತ್ಪನ್ನವನ್ನು ಕೊಂಡು ಮಾರ್ಕೆಟಿಂಗ್ ಕಾರ್ಯಗಳನ್ನು ನಿರ್ವಹಿಸುತ್ತಾರೆ ಎಂಬುದನ್ನು ಗಮನಿಸುವುದು ಬಹಳ ಮುಖ್ಯ. ಹೀಗಾಗಿ ನಿಯಂತ್ರಿತ ಮಾರುಕಟ್ಟೆಗಳ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕದ ಹೊರತು, ಮಾರುಕಟ್ಟೆಯಲ್ಲಿ ವಿವಿಧ ರೀತಿಯ ಖರೀದಿದಾರರನ್ನು ಆಕರ್ಷಿಸಲು ಸಾಧ್ಯವಾಗುವುದಿಲ್ಲ ಮತ್ತು ಸ್ಪರ್ಧಾತ್ಮಕ ಬೆಳೆಗಳನ್ನು ರೈತರಿಗೆ ನೀಡಲು ಸಾಧ್ಯವಾಗುವುದಿಲ್ಲ. ಎಪಿಎಂಸಿ ಗಳಲ್ಲಿ ಸ್ಪರ್ಧೆ ಇಲ್ಲದೆಯೇ ಮಂಡಿ ವ್ಯಾಪಾರಿಗಳು ಅಕ್ರಮ ಮತ್ತು ಅತಿರೇಕದ ಅನಗತ್ಯ ಕಡಿತಗಳನ್ನು (deductions) ರೈತರ ಬೆಳೆಯಲ್ಲಿ ಮಾಡುತ್ತಾರೆ. ಭಾರತದಲ್ಲಿನ ರೈತರಿಗೆ ಸಬ್ಸಿಡಿಗಳು ಮತ್ತು ಬೆಂಬಲಗಳು ಕಡಿಮೆ ಮಾಡಿದ್ದರೂ ಕೃಷಿ ಉತ್ಪಾದನೆಯಲ್ಲಿ ತಮ್ಮ ಆರ್ಥಿಕ ದಕ್ಷತೆಯನ್ನು ವಿಕಸನಗೊಂಡಿರುವ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಅವರ ಕೊಡುಗೆ ಕೊಡುತ್ತಿದ್ದಾರೆ. ಹೀಗಾಗಿ ಪ್ರಸ್ತುತ ಭಾರತವು ವಿಶ್ವದ ಅತಿದೊಡ್ಡ ಅಕ್ಕಿ ರಫ್ತುದಾರ ಹಾಗೂ ಎರಡನೆಯ ಅತಿದೊಡ್ಡ ಹತ್ತಿ ರಫ್ತುದಾರ. ಆದಾಗ್ಯೂ, ಹೆಚ್ಚಿನ ಅಂತರರಾಷ್ಟ್ರೀಯ ಹೆಚ್ಚಿನ ಬೆಲೆಗಳ ಪ್ರಯೋಜನಗಳು ರೈತರಿಗೆ ಮಧ್ಯವರ್ತಿಯಿಂದ ಸೇರುವುದಿಲ್ಲ. ಹೀಗಾಗಿ ದೇಶೀಯ ಮಾರುಕಟ್ಟೆಗಳು ಸ್ಪರ್ಧಾತ್ಮಕವಾಗಿದ್ದರೆ ಮಾತ್ರ ರೈತರಿಗೆ ಗ್ರಾಹಕರು ಕೊಡುವ ಹೆಚ್ಚಿನ ಬೆಲೆಯಲ್ಲಿ ಹೆಚ್ಚಿನ ಪಾಲನ್ನು ಕೊಡಲು ಸಾಧ್ಯವಾಗುತ್ತದೆ. ಈ ಸುಧಾರಣೆಗಳು ನಿರ್ಣಾಯಕ ಮತ್ತು ಅವುಗಳಲ್ಲಿ ಪ್ರಮುಖವಾದುದು ಎಪಿಎಂಸಿಗಳಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ಎಪಿಎಂಸಿ ಮಾರುಕಟ್ಟೆ ಪ್ರಾಂಗಣದಲ್ಲಿ ಮಾತ್ರ ಎಪಿಎಂಸಿ ವ್ಯಾಪಾರಿಗಳಿಗೆ ಮಾರಾಟ ಮಾಡಬೇಕು ಎಂಬ ಎಪಿಎಂಸಿಗಳಲ್ಲಿ ವಿಧಿಸಿರುವ ನಿರ್ಬಂಧಗಳನ್ನು ತೆಗೆದುಹಾಕುವುದು.

---

[5] Bhoi, B.B., Sujata Kundu, Vimal Kishore and Suganti, D, Supply chain dynamics and food inflation in India, RBI Bulletin, Oct 2019, pp. 95-111.

**ಬೆಲೆ ಪ್ರಸರಣದ ಸ್ಥಿತಿಸ್ಥಾಪಕತ್ವ**

ದೇಶೀಯ ಸಗಟು ಮಾರುಕಟ್ಟೆ ಮತ್ತು ರೈತರ ಫಾರ್ಮ್ನ ಬೆಲೆಗಳ ನಡುವಿನ ಸಂಬಂಧ (elasticity of price transmission) ಸಗಟು ಮಾರುಕಟ್ಟೆ ಮತ್ತು ಫಾರ್ಮ್ ಮಟ್ಟದ ನಡುವಿನ ಸಂಬಂಧದ ಬಲದ ಸೂಚಕವಾಗಿದೆ. ಈ ಸೂಚಕವೂ ಸಗಟು ಮಾರುಕಟ್ಟೆಯಿಂದ ರೈತರಿಗೆ ಎಷ್ಟು ಬೆಲೆ ಪ್ರಯೋಜನವನ್ನು ವರ್ಗಾಯಿಸುತ್ತದೆ ಎಂಬ ಗುಣಾಂಕ ವನ್ನು ಸೂಚಿಸುತ್ತದೆ. ಸಗಟು ಮಾರುಕಟ್ಟೆ ಮತ್ತು ರೈತರ ಫಾರ್ಮ್ ಬೆಳೆಗಳ ನಡುವಿನ ಬೆಲೆ ಸ್ಥಿತಿಸ್ಥಾಪಕತ್ವವು ಅಕ್ಕಿಗೆ 1.04, ಮೆಕ್ಕೆ ಜೋಳ 1.03, ಕಡಲೆ 0.86, ಸಾಸುವೆ 0.88 ಎಂದು ಅಂದಾಜಿಸಲಾಗಿದೆ. ಆದ್ದರಿಂದ, ಸಗಟು ಬೆಲೆಯಲ್ಲಿ ಶೇಕಡಾ 1 ಹೆಚ್ಚಳ ವಾದರೆ, ಅಕ್ಕಿ ಮತ್ತು ಮೆಕ್ಕೆ ಜೋಳದಲ್ಲಿ ಫಾರ್ಮ್ ಬೆಲೆಯಲ್ಲಿ ಶೇಕಡಾ 1 ಕ್ಕಿಂತ ಹೆಚ್ಚಾಗುತ್ತದೆ. ಸಗಟು ಮಾರುಕಟ್ಟೆಯಲ್ಲಿ ಸಾಸಿವೆ ಎಣ್ಣೆಯ ಬೆಲೆಯಲ್ಲಿ ಶೇಕಡಾ ಒಂದು ಹೆಚ್ಚಳವಾದರೆ, ಫಾರ್ಮ್ ಬೆಲೆಯಲ್ಲಿ ಸಾಸುವೆಯ ಬೆಲೆ ಶೇಕಡಾ 0.88 ರಷ್ಟು ಹೆಚ್ಚಾಗುತ್ತದೆ. ಆದರೆ ಪ್ರಸ್ತುತ ಮಾರುಕಟ್ಟೆಗಳ ಮತ್ತಷ್ಟು ಸುಧಾರಣೆಗಳಿದ್ದರೆ, ಈ ಬೆಲೆ ಪ್ರಸರಣ ಸ್ಥಿತಿಸ್ಥಾಪಕತ್ವವು ಸ್ಪರ್ಧೆಯಿಂದಾಗಿ ರೈತರಿಗೆ ಖಂಡಿತವಾಗಿಯೂ ಹೆಚ್ಚಿನ ಪ್ರಯೋಜನವನ್ನು ನೀಡುತ್ತದೆ. ಈ ಆವಿಷ್ಕಾರವನ್ನು ಪ್ರೊ ರಮೇಶ್ ಚಂದ್ ರವರು[6] ತಿಳಿಸಿರುವರು.

**MSP ಭತ್ತ ಬೆಳೆದು ಪಂಜಾಬಿನ ರೈತರು ಅಂತರ್ಜಲವನ್ನು ಕುಂಠಿತಗೊಳಿಸಿರುವುದರಿಂದ ನೂತನ ಕೃಷಿ ಕಾನೂನುಗಳು ಪಂಜಾಬಿನ ರೈತರಿಗೆ ಪ್ರಯೋಜನವನ್ನು ನೀಡುತ್ತವೆ**

ಅಂತರ್ಜಲ ನೀರಾವರಿ ಬಳಸಿ ಭತ್ತ, ಗೋಧಿ ಕೃಷಿಯಲ್ಲಿ ಪ್ರಾಬಲ್ಯ ಹೊಂದಿರುವ ಪಂಜಾಬ್. ಒಂದು ವಿಶಿಷ್ಟವಾದ ಮಾನವ ನಿರ್ಮಿತ ಕೃಷಿ ಉತ್ಪಾದನಾ ವ್ಯವಸ್ಥೆಯನ್ನು ಹೊಂದಿದೆ. ಪಂಜಾಬಿನಲ್ಲಿ ಶೇಕಡಾ 100 ರಷ್ಟು ನೀರಾವರಿ ಇದೆ. ಕಾಲುವೆಗಳು ಶೇಕಡಾ 28 ರಷ್ಟು ನೀರಾವರಿ ಮಾಡಿದರೆ, ಕೊಳವೆ ಭಾವಿಗಳು ನಿವ್ವಳ ಬಿತ್ತನೆ ಪ್ರದೇಶದ ಶೇಕಡಾ 72 ರಷ್ಟು ನೀರಾವರಿ ನೀಡುತ್ತವೆ. ಐದು ಹರಿಯುವ ನದಿಗಳಿದ್ದರೂ ಸಹ, ಅಂತರ್ಜಲ ಮಟ್ಟವು ಬಹಳ ಕುಸಿದಿದ್ದು, ಶೇಕಡಾ 80 ರಷ್ಟು ಬ್ಲಾಕ್‌ಗಳು ಕಪ್ಪು ಪಟ್ಟಿಯಲ್ಲಿ ಅಂತರ್ಜಲವು ಹೆಚ್ಚು ಶೋಷಣೆಗೆ ಒಳಗಾಗಿದೆ ಹಾಗೂ ಅಂತರ್ಜಲದ ಅತಿಯಾದ ಶೋಷಣೆ ಶೇಕಡಾ 79 ರಷ್ಟು ಆಗಿ, ಪಂಜಾಬ್ ಅಗ್ರಸ್ಥಾನದಲ್ಲಿದೆ. ಪ್ರಸ್ತುತ ಶೇಕಡಾ 45 ರಷ್ಟು ನಿವ್ವಳ ಬಿತ್ತನೆ ಪ್ರದೇಶವು ಗೋಧಿಯ ಬೆಲೆಯಲ್ಲೂ, ಶೇಕಡಾ 36 ರಷ್ಟು ಭತ್ತದಲ್ಲೂ ಆಗಿ, ಶೇಕಡಾ 83 ರಷ್ಟು ಆಹಾರ ಧಾನ್ಯಗಳೆ ಬೆಳೆಯುತ್ತಾರೆ. ಸುಮಾರು ಶೇಕಡಾ 35% ರೈತರು ಸಣ್ಣ ಮತ್ತು ಅತಿ ಸಣ್ಣ ವರ್ಗಕ್ಕೆ ಸೇರಿದವರಾಗಿದ್ದರೆ, ಶೇಕಡಾ 65 ರಷ್ಟು ರೈತರು 5 ಎಕರೆಗಿಂತ ಹೆಚ್ಚು ಭೂಮಿ ಹೊಂದಿದ್ದಾರೆ. ಪಂಜಾಬಿನಲ್ಲಿ ಪ್ರತಿ 1000 ಹೆಕ್ಟೇರಿಗೆ, 75 ಟ್ರಾಕ್ಟರು ಗಳಿವೆ. 152 ಎಪಿಎಂಸಿಗಳೊಂದಿಗೆ, ಸಂಪೂರ್ಣ ಅಕ್ಕಿಯ ಖರೀದಿ ಹಾಗೂ ಸಂಗ್ರಹಣೆ MSP ಬೆಲೆಯಲ್ಲಿ ಆಗುತ್ತಿದ್ದು, ಗೋಧಿಯಲ್ಲಿ ಶೇಕಡಾ 80 ರಷ್ಟು ಸಂಗ್ರಹಣೆ ಆಗುತ್ತಿದೆ. ಎಲ್ಲ ಹಳ್ಳಿಗಳೂ ಡಾಂಬರು ರಸ್ತೆ ಸಂಪರ್ಕ ಹೊಂದಿವೆ. ಹೀಗಾಗಿ ಪಂಜಾಬಿನ ರೈತರು ದೇಶದ ಶೇಕಡಾ 24 ರಷ್ಟು ಅಕ್ಕಿ ಹ್ ಆಗೂ ದೇಶದ 40 ರಷ್ಟು ಗೋಧಿ ಸಂಗ್ರಹಣೆಗೆ ಕಾರಣರಾಗಿದ್ದಾರೆ.

ಆದರೆ, ಈ ಎಂಎಸ್ಪಿ ಇಂದ ಪಂಜಾಬಿನ ರೈತರು ಏಕ ಬೆಳೆ ಕೃಷಿಯನ್ನು ಅಂದರೆ ಭತ್ತವನ್ನೇ ಹೆಚ್ಚು ಬೆಳೆಯುತ್ತಿದ್ದಾರೆ. ಅದೂ ಅಂತರ್ಜಲವನ್ನು ಉಪಯೋಗಿಸಿ ಭತ್ತ ಬಿ ಬೆಳೆಯುತ್ತಿರುವುದು ಅಂತರ್ಜಲದ ಮಟ್ಟವನ್ನು ವೇಗವಾಗಿ ಕುಸಿಯುವಂತೆ ಮಾಡಿದೆ. ಭತ್ತ ಬೆಳೆಯಲು ಪ್ರತಿ ಕಿಲೋಗೆ 5000 ಲೀಟರ್ ಬಳಸುವುದರಿಂದ, ಇದು

---

[6] Ramesh Chand, 1999, Effects of trade liberalization on Agriculture in India: Commodity Aspects, The CGPRT Center, Working paper No. 45, UN/ESCAP, p 27.

ಅಮೂಲ್ಯವಾದ ಅಂತರ್ಜಲವು ಬಳಸಿ ಬೆಳೆಯುವ ಅತ್ಯಂತ ಅಸಮರ್ಥ ಬೆಳೆಯಾಗಿದೆ. ಆದರೆ ರೈತರಿಗೆ ಸರ್ಕಾರವು ಸರಿಯಾದ ಕೃಷಿ ವಿಸ್ತರಣೆ ಮಾಡಿ, ಭತ್ತಕ್ಕಿಂತ ಅತಿ ಹೆಚ್ಚು ಲಾಭ ಬರುವ ಹಲವಾರು ತೋಟಗಾರಿಕೆ - ಹಣ್ಣು, ತರಕಾರಿ, ಹೂವಿನ ಬೆಳೆಗಳನ್ನು ಬೆಳೆದು ಸಮೀಪವೇ ಇರುವ ಉತ್ತಮವಾಗಿ ರಸ್ತೆ ಸಂಪರ್ಕ ಹೊಂದಿರುವ ದೆಹಲಿ ಮಹಾನಗರಕ್ಕೆ ಮಾರಿ ಒಳ್ಳೆಯ ಆದಾಯ ಪಡೆಯಬಹುದಾಗಿದೆ. ಉದಾಹರಣೆಗೆ ಈಗಾಗಲೇ ದೆಹಲಿ ಮಾರುಕಟ್ಟೆಗೆ ಜಲ್ಗಾಂವ್, ತಿರುವನಂತಪುರ, ಅನಂತಪುರಗಳಿಂದ ದಿಂದ ಬಾಳೆಹಣ್ಣುಗಳನ್ನು ಮಾರಲಾಗುತ್ತಿದೆ. ಇದಕ್ಕೆ ಅಪಾರ ಸಾರಿಗೆ ವೆಚ್ಚವನ್ನು ಖರ್ಚು ಮಾಡಲಾಗುತ್ತಿದೆ. ಈ ಬೆಳೆಗಳನ್ನು ಭತ್ತದ ಬದಲು ಪಂಜಾಬ್‌ನಲ್ಲಿ ಬೆಳೆಸಬಹುದು. ಈ ಪ್ರಯೋಜನವನ್ನು ಕರ್ನಾಟಕದ ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳ ರೈತರು ಬೆಂಗಳೂರು ಮತ್ತು ಚೆನ್ನೈಗೆ ಸರಬರಾಜು ಮಾಡಲು ತರಕಾರಿ ಹೂವು ಮತ್ತು ಹಣ್ಣುಗಳನ್ನು ಬೆಳೆಸುತ್ತಿದ್ದಾರೆ.

## II. ಕಾಂಟ್ರಾಕ್ಟ್ ಫಾರ್ಮಿಂಗ್ ಸಂಬಂಧ ಪಟ್ಟ ಸುಗ್ರೀವಾಜ್ಞೆ

ಬೆಲೆ ಭರವಸೆ ಮತ್ತು ಕೃಷಿ ಸೇವೆಗಳ ಸುಗ್ರೀವಾಜ್ಞೆ 2020 ರ ರೈತರ (ಸಬಲೀಕರಣ ಮತ್ತು ಸಂರಕ್ಷಣೆ) ಒಪ್ಪಂದವನ್ನು ಸಂಸತ್ತು ಸೆಪ್ಟೆಂಬರ್ 2020 ರಲ್ಲಿ ಅಂಗೀಕರಿಸಿತು. ಇಲ್ಲಿ ರೈತರ ಬೆಲೆ ಹಿತಾಸಕ್ತಿಗಳನ್ನು ರಕ್ಷಿಸುವ ಗುತ್ತಿಗೆ ಕೃಷಿಯ ಮೂಲಕ ಬೆಳೆ ಬೆಳೆಯಬಹುದು. ವಿಮಾ ಸೌಲಭ್ಯವನ್ನೂ ಸಾಲ ಸೌಲಭ್ಯವನ್ನೂ ಪಡೆಯಬಹುದು. ಇದು ಯಾವದೇ ರೈತರ ಬಳಿ ಶ್ರಮ ಮತ್ತು ಭೂಮಿಯನ್ನು ಹೊರತುಪಡಿಸಿ ಸಮರ್ಪಕ ಸಂಪನ್ಮೂಲಗಳನ್ನು ಹೊಂದಿರದ ಸಣ್ಣ ರೈತರಿಗೆ, ಯಾವುದೇ ಕೃಷಿ ವ್ಯವಹಾರ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ಪ್ರೋತ್ಸಾಹಿಸುತ್ತದೆ, ಉತ್ಪಾದನೆ ಮಾಡುವಲ್ಲಿ ಟ್ರಾಕ್ಟರ್ ಮತ್ತು ಯಂತ್ರೋಪಕರಣಗಳ ಸೇವೆಗಳು ಮತ್ತು ಇತರ ಒಳಹರಿವುಗಳನ್ನು ಒದಗಿಸುತ್ತದೆ ಮತ್ತು ಉತ್ಪನ್ನಗಳನ್ನು ಪೂರ್ವನಿರ್ಧರಿತ ಬೆಲೆಗೆ ಮಾರಾಟ ಮಾಡುತ್ತದೆ. ಈ ಬೆಲೆ ಸಹ ಪರಿಶೀಲನೆಗೆ ಒಳಪಟ್ಟಿರುತ್ತದೆ, ಒಪ್ಪಂದಕ್ಕೆ ಪ್ರವೇಶಿಸಿದ ನಂತರ ಬೆಲೆ ಏರಿಕೆ ಇದ್ದರೆ ರೈತರನ್ನು ಅನಾನುಕೂಲಕ್ಕೆ ಒಳಪಡಿಸುವುದಿಲ್ಲ ಮತ್ತು ಪ್ರಸ್ತುತ ಬೆಲೆಯನ್ನು ಪರಿಗಣಿಸಲಾಗುತ್ತದೆ. ರೈತರೊಂದಿಗೆ ಸಂಸ್ಕರಣೆಗೆ ಗುಣಮಟ್ಟದ ಉತ್ಪನ್ನಗಳನ್ನು ಪೂರೈಸಲು ಒಪ್ಪಂದ ಮಾಡಿಕೊಳ್ಳಬಹುದು ಮತ್ತು ಇದು ಗ್ರಾಮೀಣ ಪ್ರದೇಶಗಳಲ್ಲಿ ದೊಡ್ಡ ಆರ್ಥಿಕ ಚಟುವಟಿಕೆಗಳಿಗೆ ಕಾರಣವಾಗಬಹುದು.

ಬೆಳೆಗಾರರು ಮತ್ತು ಆಹಾರ ಸಂಸ್ಕರಣಾ ಘಟಕವುಳ್ಳ ಖರೀದಿದಾರರು ಉತ್ಪಾದನೆಗೆ ಮುಂಚಿತವಾಗಿ ಲಿಖಿತ ಒಪ್ಪಂದವನ್ನು ಮಾಡಿಕೊಳ್ಳಬಹುದು. ಮಾರುಕಟ್ಟೆಯ ಬೆಲೆ ಮತ್ತು ಬೇಡಿಕೆಯ ಏರಿಳಿತದ ಅಪಾಯವನ್ನು ಕಡಿಮೆ ಮಾಡುವುದು ರೈತರಿಗೆ ಅನುಕೂಲವಾಗಲಿದೆ. ಅದೇ ಸಮಯದಲ್ಲಿ, ಖರೀದಿದಾರರು ಗುತ್ತಿಗೆ ಕೃಷಿಯ ಮೂಲಕ ಗುಣಮಟ್ಟದ ಉತ್ಪನ್ನಗಳು ಲಭ್ಯವಿಲ್ಲದಿರುವ ಅಪಾಯವನ್ನು ಕಡಿಮೆ ಮಾಡಿಕೊಳ್ಳಬಹುದು. ಕೃಷಿ ಉತ್ಪನ್ನಗಳನ್ನು ಖರೀದಿಸಲು ರೈತನೊಂದಿಗೆ ಒಪ್ಪಂದ ಮಾಡಿಕೊಳ್ಳಲು ವ್ಯಕ್ತಿಗಳು, ಕಂಪನಿಗಳು, ಪಾಲುದಾರಿಕೆ ಸಂಸ್ಥೆಗಳು, ಸೀಮಿತ ಹೊಣೆಗಾರಿಕೆ ಗುಂಪುಗಳು ಅಥವಾ ಸಂಘಗಳು ಆಗಿರಬಹುದು. ಒಪ್ಪಂದಗಳನ್ನು ರಾಜ್ಯಗಳು ಸ್ಥಾಪಿಸಿದ ನೋಂದಣಿ ಪ್ರಾಧಿಕಾರವು ಗುರುತಿಸಬೇಕು. ಸ್ಟಾಕ್ ಮಿತಿ ಕಟ್ಟುಪಾಡುಗಳಿಂದ ವಿನಾಯಿತಿ, ಅಗತ್ಯ ಸರಕುಗಳ ಕಾಯ್ದೆ 1955 ರಿಂದ ವಿನಾಯಿತಿ, ಮತ್ತು ಎಲ್ಲಾ ರಾಜ್ಯ ಕಾಯಿದೆಗಳಿಂದ ವಿನಾಯಿತಿ ಲಭ್ಯವಿದೆ. ಆದಾಗ್ಯೂ ರಾಜ್ಯದ ಎಲ್ಲಾ ಕಾಯಿದೆಗಳಿಂದ ವಿನಾಯಿತಿ ನೀಡುವುದು ಭವಿಷ್ಯದಲ್ಲಿ ಸಮಸ್ಯೆಯಾಗಬಹುದು.

ಒಪ್ಪಂದವು ಉತ್ಪನ್ನಗಳ ಗುಣಮಟ್ಟ, ಖಾತರಿಪಡಿಸಿದ ಬೆಲೆ ಮತ್ತು ಇತರೆ ನಿಬಂಧನೆಗಳನ್ನು ಸೂಚಿಸುತ್ತವೆ. ಒಪ್ಪಿದ ಮೊತ್ತವನ್ನು ವಿತರಣೆಯ ಸಮಯದಲ್ಲಿ ಪಾವತಿಸಬೇಕು. ಒಪ್ಪಂದವು ಪೂರೈಕೆ, ಗುಣಮಟ್ಟ, ಮಾನದಂಡಗಳು, ಮೇಲ್ವಿಚಾರಣೆ ಮತ್ತು ಪ್ರಮಾಣೀಕರಣದ ನಿಯಮಗಳು ಮತ್ತು ಷರತ್ತುಗಳನ್ನು ಒಳಗೊಂಡಿರಬಹುದು. ಬೆಳೆಗಳಿಗೆ

ಅಪಾಯವನ್ನು ತಗ್ಗಿಸಲು ಒಪ್ಪಂದದಲ್ಲಿ ಬೆಳೆ ವಿಮೆ ಮತ್ತು ಬೆಳೆ ಸಾಲದೊಂದಿಗೆ ಹೊಂದಿಸಬಹುದು. ಪ್ರಾಯೋಜಕರು ಯಾವುದೇ ಪರಿಸ್ಥಿತಿಯಲ್ಲಿ ಮಾಲೀಕತ್ವದ ಹಕ್ಕುಗಳನ್ನು ಪಡೆಯಲು ಅಥವಾ ರೈತರ ಭೂಮಿಗೆ ಶಾಶ್ವತ ಮಾರ್ಪಾಡುಗಳನ್ನು ಮಾಡಲು ಸಾಧ್ಯವಿಲ್ಲ. ಗುತ್ತಿಗೆ ಕೃಷಿ ಒಪ್ಪಂದವು ಕನಿಷ್ಠ ಒಂದು ಬೆಳೆಯ ಕಾಲ ಅಥವಾ ಜಾನುವಾರುಗಳಿಗೆ ಸಂಬಂಧಪಟ್ಟಂತೆ ಒಂದು ಉತ್ಪಾದನಾ ಚಕ್ರ ಗರಿಷ್ಠ 5 ವರ್ಷಗಳವರೆಗೆ ಇರಬೇಕು. ವಿವಾದಗಳ ಇತ್ಯರ್ಥಕ್ಕಾಗಿ, ಎರಡೂ ಪಕ್ಷಗಳಿಗೆ ಪ್ರಾತಿನಿಧ್ಯವನ್ನು ಹೊಂದಿರುವ ಸಮಾಲೋಚನಾ ಮಂಡಳಿಯನ್ನು ಸೇರಿಸಲು ಒಪ್ಪಂದದ ಅಗತ್ಯವಿದೆ. ಪಕ್ಷಗಳು ಇತ್ಯರ್ಥವನ್ನು ತಲುಪಲು ವಿಫಲವಾದರೆ, ಅವರು ಉಪ ಆಯುಕ್ತರನ್ನು ಸಂಪರ್ಕಿಸಬಹುದು, ಅವರು ಬಡ್ಡಿಯೊಂದಿಗೆ ಬಾಕಿ ಹಣವನ್ನು ವಸೂಲಿ ಮಾಡಲು ಆದೇಶಿಸಬಹುದು. ಬಾಕಿ ಹಣವನ್ನು ವಸೂಲಿ ಮಾಡಲು ರೈತರ ಭೂಮಿಯ ಮೇಲೆ ಯಾವುದೇ ಕ್ರಮ ಕೈಗೊಳ್ಳಲು ಅವಕಾಶವಿರುವುದಿಲ್ಲ.

ಪ್ರಸ್ತುತ ಕರ್ನಾಟಕದ ರೈತರು ವಿವಿಧ ಸಂಸ್ಥೆಗಳೊಂದಿಗೆ ಗುತ್ತಿಗೆ ಕೃಷಿ ಒಪ್ಪಂದ ಮಾಡಿಕೊಂಡಿದ್ದಾರೆ. ಅಂತಹ ಒಂದು ಉದಾಹರಣೆಯೆಂದರೆ ಬಿಡದಿ ಯಲ್ಲಿರುವ ನಾಮಧಾರಿ ಕಂಪನಿ. ಈ ಸಂಸ್ಥೆಗೆ ಸಣ್ಣ ರೈತರು ನೀರಾವರಿ ಸೌಲಭ್ಯವಿದ್ದವರು ಗುತ್ತಿಗೆ ಕೃಷಿಯಲ್ಲಿ ಯುರೋಪಿಗೆ ರಫ್ತು ಮಾಡಲು ಉತ್ತಮ ಕೃಷಿ ಪದ್ಧತಿಗಳನ್ನು ಅನುಸರಿಸಿ ಸೋರೆಕಾಯಿ ಬೆಳೆದು ಕೊಡುತ್ತಿದ್ದಾರೆ. ನಾಮಧಾರಿ ಕಂಪನಿಯವರು ಗುತ್ತಿಗೆ ಕೃಷಿ ಆಧಾರದ ಮೇಲೆ ಒಳ್ಳೆಯ ಗುಣಮಟ್ಟದ ತರಕಾರಿಗಳನ್ನು ಒಪ್ಪಂದ ಕೃಷಿ ರೈತರ ಹತ್ತಿರ ಪಡೆದು ರಫ್ತು ಮಾಡುವದರ ಜತೆಗೆ, ಇತರೆ ಗುಣಮಟ್ಟದ ತರಕಾರಿಯನ್ನು ಅವರದ್ದೇ ಆದ ನಾಮಧಾರಿ ಫ್ರೆಶ್ ಎಂಬ ಅಂಗಡಿಗಳ ಮೂಲಕ ಜನಸಾಮಾನ್ಯರಿಗೆ ಮಾರಾಟ ಮಾಡಿ ರೈತರ ಶ್ರಮಕ್ಕೆ ಪ್ರತಿಫಲ ನೀಡುತ್ತಿದ್ದಾರೆ. ಈ ರೀತಿ ಗುತ್ತಿಗೆ ಕೃಷಿಯ ಕುರಿತಾದ ಅಧ್ಯಯನಗಳು ಗುತ್ತಿಗೆ ರಹಿತ ರೈತರಿಗಿಂತ ಗುತ್ತಿಗೆ ರೈತರಿಗೆ ಪ್ರಯೋಜನಗಳನ್ನು ಸೂಚಿಸಿವೆ. ಬೇಬಿ ಕಾರ್ನ್ ಬೆಳೆಯುತ್ತಿರುವ ರೈತರ ಅಧ್ಯಯನದಲ್ಲಿ, ಸಣ್ಣ ಮತ್ತು ಮಧ್ಯಮ ಗುತ್ತಿಗೆ ರೈತರಲ್ಲಿ ಶೇಕಡ 50 ಕ್ಕಿಂತ ಹೆಚ್ಚು ರೈತರು ತಮ್ಮ ಒಟ್ಟು ಆದಾಯದ 74% ನಷ್ಟು ಬೇಬಿ ಕಾರ್ನ್ ಗುತ್ತಿಗೆ ಕೃಷಿಯಿಂದ ಪಡೆದಿದ್ದಾರೆ ಎಂದು ವರದಿಯಾಗಿದೆ. ದೊಡ್ಡ ರೈತರಿಗೆ, ಅವರ ಒಟ್ಟು ಆದಾಯದ ಸುಮಾರು 54% ಗುತ್ತಿಗೆ ಕೃಷಿಯಿಂದ ಬಂದಿದೆ. ಎಕರೆಗೆ ಗುತ್ತಿಗೆ ಬೆಳೆಯಿಂದ ಬರುವ ಆದಾಯವು ಸಣ್ಣ ರೈತರಿಗೆ (14,625 ರೂ.), ದೊಡ್ಡ ರೈತರಿಗೆ ರೂ 13,131 ಮತ್ತು ಮಧ್ಯಮ ರೈತರಿಗೆ ರೂ 10,287 ಆದಾಯ ಲಭ್ಯವಾಗಿದೆ. ಕಡಿಮೆ ಆರಂಭಿಕ ಖರ್ಚು, ಉತ್ತಮ ಮತ್ತು ಖಚಿತವಾದ ಬೆಲೆ ಮತ್ತು ಆಶ್ವಾಸಿತ ಮಾರುಕಟ್ಟೆ, ತಾಂತ್ರಿಕ ಸಲಹೆ, ಸಾರಿಗೆ ಸೌಲಭ್ಯಗಳು ಇವುಗಳನ್ನು ರೈತರಿಗೆ ಒಪ್ಪಂದಕ್ಕೆ ಒಳಪಡಿಸಿದ್ದ ಅಂಶಗಳಾಗಿವೆ.

## III. ಅಗತ್ಯ ಸರಕುಗಳ ಕಾಯ್ದೆ, 1955 ಇಸಿಎಗೆ ತಿದ್ದುಪಡಿ ತರಲಾಗಿದೆ

**ಅಗತ್ಯ ಸರಕುಗಳ ಕಾಯ್ದೆಯನ್ನು** ಆಹಾರದ ಕೊರತೆಯ ಸಮಯದಲ್ಲಿ ಬೆಲೆಗಳು ಕೃತಕವಾಗಿ ಹೆಚ್ಚಿ, ಗ್ರಾಹಕರ ಮೇಲೆ ಪರಿಣಾಮ ಬೀರಬಾರದು ಎಂಬ ದೃಷ್ಟಿಯಿಂದ ತರಲಾಯಿತು. ಏಕೆಂದರೆ ವ್ಯಾಪಾರಿಗಳು ಆಗ ತಮ್ಮ ಹತ್ತಿರ ಆಹಾರ ವಸ್ತುಗಳನ್ನು ಸಂಗ್ರಹಣೆ ಮಾಡಿ ಕೃತಕವಾಗಿ ಮಾರುಕಟ್ಟೆಯಲ್ಲಿ ಬೆಲೆ ಏರಿಸಿ ಲಾಭ ಪಡೆಯಬಹುದಾಗಿತ್ತು. ಆದರೆ ಈಗ ಭಾರತಕ್ಕೆ ಹಸಿರು ಕ್ರಾಂತಿ ಬಂದಾಗಿನಿಂದ ಆಹಾರದಲ್ಲಿ ಹೆಚ್ಚುವರಿ ಉತ್ಪಾದನೆಯಾಗಿದೆ. ಉದಾಹರಣೆಗೆ, ತಲಾವಾರು ದಿನವೊಂದಕ್ಕೆ 1 ಕೆಜಿ ಆಹಾರವನ್ನು ಉತ್ಪಾದಿಸುತ್ತಿದ್ದ ಭಾರತ ಈಗ ತಲಾವಾರು ದಿನವೊಂದಕ್ಕೆ1.74 ಕೆಜಿ ಆಹಾರವನ್ನು ಉತ್ಪಾದಿಸುತ್ತಿದೆ. ಹೀಗಾಗಿ, ಹೋರ್ಡಿಂಗ್ ಪರಿಕಲ್ಪನೆಯು ಇನ್ನು ಮುಂದೆ ಸೂಕ್ತವಲ್ಲ. ಮತ್ತು ಹೊಸ ಹೂಡಿಕೆದಾರರಿಗೆ ಸಂಸ್ಕರಣೆ, ಸಂಗ್ರಹಣೆ, ವ್ಯಾಪಾರ ಮತ್ತು ರಫ್ತು ಮಾಡುವಲ್ಲಿ ಕಾನೂನಿನ ನಿಬಂಧನೆಗಳು ಹಾನಿಕಾರಕವಾಗಬಹುದು, ಏಕೆಂದರೆ ಅವುಗಳು ಹೆಚ್ಚಿನ ಪ್ರಮಾಣದ ಸರಕುಗಳನ್ನು ನಿರ್ವಹಿಸಬೇಕಾಗುತ್ತದೆ. ಹೀಗಾಗಿ, ಈ ಸರಕುಗಳನ್ನು ಸಂಸ್ಕರಣೆ, ಮಿಲ್ಲಿಂಗ್, ರಫ್ತು ಅಥವಾ ಆಮದು ಅಥವಾ ವ್ಯಾಪಾರಕ್ಕಾಗಿ ಸಂಗ್ರಹಿಸುವ

ಮೇಲಿನ ನಿರ್ಬಂಧಗಳನ್ನು ತೆಗೆದುಹಾಕುವ ಸಲುವಾಗಿ ಧಾನ್ಯಗಳು, ಬೇಳೆಕಾಳುಗಳು, ಎಣ್ಣೆಕಾಳುಗಳು, ಖಾದ್ಯ ತೈಲ, ಈರುಳ್ಳಿ ಮತ್ತು ಆಲೂಗಡ್ಡೆಗಳನ್ನು ಅಗತ್ಯ ವಸ್ತುಗಳ ಪಟ್ಟಿಯಿಂದ ತೆಗೆದುಹಾಕಲು ಇಸಿಎಗೆ ತಿದ್ದುಪಡಿ ತರಲಾಗಿದೆ. ಆದಾಗ್ಯೂ, ಸರ್ಕಾರವು ಅದರ ಸರಬರಾಜನ್ನು ನಿಯಂತ್ರಿಸಬಹುದು ಅಥವಾ "ಯುದ್ಧ, ಕ್ಷಾಮ, ಹೆಚ್ಚುವರಿ ಸಾಮಾನ್ಯ ಬೆಲೆ ಏರಿಕೆ ಮತ್ತು ಗಂಭೀರ ಪ್ರಕೃತಿಯ ನೈಸರ್ಗಿಕ ವಿಪತ್ತುಗಳಂತಹ" ಹೆಚ್ಚುವರಿ ಸಂದರ್ಭಗಳಲ್ಲಿ ಅವುಗಳನ್ನು ಮರು ಸೇರಿಸಿಕೊಳ್ಳಬಹುದು. ಹೀಗಾಗಿ, ಉದ್ಯಮಿಗಳಿಗೆ ಆರ್ಥಿಕತೆಯ ಲಾಭಕ್ಕಾಗಿ ವ್ಯಾಪಾರ, ಪ್ರಕ್ರಿಯೆ, ಸಂಯೋಜನೆ ಮತ್ತು ಇತರ ದೊಡ್ಡ-ಪ್ರಮಾಣದ ಮಾರುಕಟ್ಟೆ ಕಾರ್ಯಗಳನ್ನು ನಿರ್ವಹಿಸಲು ಅನುಕೂಲವಾಗಬೇಕಿದೆ. ಈ ತಿದ್ದುಪಡಿಯಿಂದಾಗಿ, ತೋಟಗಾರಿಕಾ ಉತ್ಪನ್ನಗಳ ಚಿಲ್ಲರೆ ಬೆಲೆಯಲ್ಲಿ 100% ಹೆಚ್ಚಳವಾಗಿದ್ದರೆ ಅಥವಾ ಆಹಾರ ಧಾನ್ಯಗಳ ಬೆಲೆಯಲ್ಲಿ 50% ಏರಿಕೆ ಕಂಡುಬಂದರೆ ಮಾತ್ರ ಈ ಪದಾರ್ಥಗಳನ್ನು ಸರ್ಕಾರ ನಿಯಂತ್ರಿಸಬಹುದಾಗಿದೆ. ಇದಕ್ಕಾಗಿ ಬೆಲೆಯನ್ನು, 12 ತಿಂಗಳ ಮುಂಚಿನ ಬೆಲೆ ಅಥವಾ ಕಳೆದ 5 ವರ್ಷಗಳ ಸರಾಸರಿ ಚಿಲ್ಲರೆ ಬೆಲೆಯಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸಲಾಗುವುದು.

## ಸಾರಾಂಶ

ಕೃಷಿಯಲ್ಲಿ ಸ್ಪರ್ಧಾತ್ಮಕ ಬೆಳೆಗಳ ನಿರೂಪಣೆಗೆ ಕೇಂದ್ರ ಸರ್ಕಾರ ತಂದಿರುವ ಮೂರು ಕಾನೂನುಗಳು ಹೊಸ ಕಾಯಿದೆಗಳ ನಿಬಂಧನೆಗಳೊಂದಿಗೆ, ಆರ್ಥಿಕತೆಯಲ್ಲಿನ ಬೆಲೆಗಳ ಮೂಲಕ ಕೊರತೆ / ಸಮೃದ್ಧಿಯನ್ನು ಸೂಚಿಸಲು ಬೇಡಿಕೆ ಮತ್ತು ಪೂರೈಕೆಗಳು ಸ್ಪರ್ಧಾತ್ಮಕವಾಗಿ ರೈತರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಗೆ ಅಡೆತಡೆಗಳಿಲ್ಲದೆ ಮುಕ್ತ ಮಾರುಕಟ್ಟೆ ದರದಲ್ಲಿ ಮಾರಾಟ ಮಾಡಲು, ಉತ್ಪನ್ನಗಳ ಇ-ವ್ಯಾಪಾರ ಸೇರಿದಂತೆ, ವ್ಯಾಪಾರದಲ್ಲಿ ಸಾಕಷ್ಟು ಸ್ವಾತಂತ್ರವನ್ನು ಪಡೆಯಲಿರುತ್ತಾರೆ ಹಾಗೂ ಎಪಿಎಂಸಿ ವರ್ತಕರು ಹಾಗೂ ಮಧ್ಯವರ್ತಿಗಳ ಕಪಿಮುಷ್ಠಿಯಿಂದ ಬಿಡುಗಡೆ ಹೊಂದಿ ರೈತರ ಸ್ಪರ್ಧಾತ್ಮಕ ಆರ್ಥಿಕ ಬೆಳವಣಿಗೆ ಯಾಗಲು ಅವಕಾಶ ಮಾಡಿಕೊಡಲಾಗಿದೆ. ಈ ಹಿಂದೆ, ವಿವಿಧ ರಾಜ್ಯಗಳಲ್ಲಿ ಎಪಿಎಂಸಿ ಕಾಯ್ದೆಗಳಿಂದ ಯಿಂದ ವಿಧಿಸಲಾದ ನಿರ್ಬಂಧಗಳಿಂದಾಗಿ, ರೈತರು ಎಪಿಎಂಸಿ ಮಾರುಕಟ್ಟೆ ಸ್ಥಳದಲ್ಲಿ ಪರವಾನಗಿ ಹೊಂದಿರುವ ವ್ಯಾಪಾರಿಗಳಿಗೆ ಮಾತ್ರ ಮಾರಾಟ ಮಾಡಬಹುದಿತ್ತು. ಹೀಗಾಗಿ ಉತ್ಪಾದನೆ / ಸೇವಾ ಕ್ಷೇತ್ರದಲ್ಲಿ ಬೇರೆ ಯಾವುದೇ ಉದ್ಯಮಿಗಳು ಅಥವಾ ಸಂಸ್ಥೆಗಳು ಅಥವಾ ರೈತರು ಮಾರುಕಟ್ಟೆಯಲ್ಲಿ ನೇರ ಖರೀದಿಸಲು ಸಾಧ್ಯವಾಗುತ್ತಿರಲಿಲ್ಲ. ಕೇವಲ ಪರವಾನಗಿ ಹೊಂದಿರುವವರಿಗೆ ಮಾತ್ರ ಮಾರಾಟ ಮಾಡಲು ಒತ್ತಾಯಿಸದ ಕಾರಣ, ರೈತರಿಗೆ ಸ್ಪರ್ಧಾತ್ಮಕ ಬೆಲೆಗಳು ಸಿಕ್ಕುತ್ತಿರಲಿಲ್ಲ. ಹೊಸ ಕಾಯಿದೆ ಗಳಿಂದಾಗಿ ರೈತರು ಈಗ ಮುಕ್ತ ಮಾರುಕಟ್ಟೆಯಲ್ಲಿ ಅವರಿಗೆ ಎಲ್ಲಿ ಅನುಕೂಲವೋ, ಎಲ್ಲಿ ಯಾರು ಒಳ್ಳೆಯ ಬೆಲೆ ಕೊಡುವರೋ, ಎಲ್ಲಿ ತಮ್ಮ ಉತ್ಪನ್ನಗಳಿಗೆ ಅನಗತ್ಯವಾಗಿ ಅಕ್ರಮ ಕಡಿತಗಳು ಮತ್ತು ಅನೌಪಚಾರಿಕ ಕಾರ್ಟೆಲ್‌ಗಳ ಮೂಲಕ ಕಡಿಮೆ ಬೆಲೆಗಳು ಇರುವುದಿಲ್ಲವೋ, ಎಲ್ಲಿ ಆರ್ಥಿಕ ಹಾಗೂ ಮಾರುಕಟ್ಟೆಯಲ್ಲಿ ದಕ್ಷತೆ ಎಪಿಎಂಸಿಗಳ ಹೊರಗೂ ಅಥವಾ ಒಳಗೂ ಇದೆಯೋ ಅಲ್ಲಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಅವರಿಗೆ ಪರ್ಯಾಯ ಮಾರ್ಗಗಳು ಕಲ್ಪಿಸಲಾಗಿದೆ. ಇದರಿಂದ ಎಪಿಎಂಸಿ ವ್ಯಾಪಾರಿಗಳಿಗೆ ಸ್ಪರ್ಧೆಯನ್ನು ಸೃಷ್ಟಿಸುತ್ತದೆ, ಹಾಗೂ ರೈತರನ್ನು ದಕ್ಷತೆಯತ್ತ ಆಕರ್ಷಿಸಲು ಸ್ಪರ್ಧಿಸಬಹುದು.

ಹೊಸ ಒಪ್ಪಂದ ಕೃಷಿ ಕಾನೂನು ಮೂಲಕ ರೈತರು ತಾವು ಉತ್ತಮ ಮಟ್ಟದ ಬೆಳೆಯನ್ನು ಬೆಳೆದು ಪಡೆಯಬಹುದಾದ ಉತ್ತಮ ಬೆಲೆಯನ್ನು ಮುಂಚೆಯೇ ನಿರ್ಧರಿಸಿ ಬಿತ್ತನೆ ಮಾಡುವ ಮೊದಲೇ ಕೊಳ್ಳುವವರ ಜತೆ ವ್ಯವಹರಿಸಿ ಒಪ್ಪಂದ ಮಾಡಿಕೊಳ್ಳುವ ಮೂಲಕ ಆಹಾರ ಸಂಸ್ಕಾರಣಾ ಘಟಕಗಳು, ಒಟ್ಟುಗೂಡಿಸುವವರು,

ರಫ್ತುದಾರರೊಂದಿಗೆ ಇತ್ಯಾದಿ ಒಪ್ಪಂದ ಮಾಡಿಕೊಳ್ಳುವ ಮೂಲಕ ಉತ್ತಮ ತಂತ್ರಜ್ಞಾನ, ಉತ್ತಮ ಮಾರುಕಟ್ಟೆಗಳು ಮತ್ತು ಉತ್ತಮ ಅರ್ಥಶಾಸ್ತ್ರದಿಂದ ಲಾಭ ಪಡೆಯಬಹುದು.

ಈ ಹಿಂದೆ 1955 ರ ಅಗತ್ಯ ಸರಕುಗಳ ಕಾಯ್ದೆಯ ಕಾರಣ ಉದ್ಯಮಿಗಳಿಗೆ ಸುಗ್ಗಿಯ ನಂತರದ ಆರ್ಥಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಲು ಯಾವುದೇ ಪ್ರೋತ್ಸಾಹವಿರಲಿಲ್ಲ. ಹೀಗಾಗಿ ಕಾಯ್ದೆಗೆ ತಿದ್ದುಪಡಿ ತಂದಿರುವುದರಿಂದ ಕೊರತೆಯನ್ನು ಮರು ವ್ಯಾಖ್ಯಾನಿಸಿ, ಉದ್ಯಮಿಗಳಿಗೆ ಕೃಷಿ ಸರಕುಗಳ ವ್ಯಾಪಾರದಿಂದ ಹೂಡಿಕೆ ಮಾಡಲು ಮತ್ತು ಲಾಭ ಪಡೆಯಲು ಅವಕಾಶಗಳನ್ನು ಒದಗಿಸುತ್ತದೆ.